# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಜನವರಿ 29, 2021

ಸಂಪುಟ : 47 ಸಂಚಿಕೆ : 270 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ಮೀಸಲಾತಿ ನೀಡದಿದ್ದರೆ ಹೋರಾಟಕ್ಕೆ ಕ್ರಾಂತಿಯ ರೂಪ

## ಹರಿಹರ ತಲುಪಿದ ಪಾದಯಾತ್ರೆ, ಸಭಾ ಕಾರ್ಯಕ್ರಮದಲ್ಲಿ ಸರ್ಕಾರಕ್ಕೆ ಕೂಡಲಸಂಗಮದ ಪಂಚಮಸಾಲಿ ಪೀಠದ ಶ್ರೀಗಳ ಎಚ್ಚರಿಕೆ



ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

**ದಾವಣಗೆರೆ, ಜ. 28 - ಇಷ್ಟು ದಿನ ಯಡಿಯೂರಪ್ಪನವರು ನಮ್ಮವರು ಎಂದು ನಂಬಿದ್ದೆವು. ಆದರೆ ನೀವು ನಮ್ಮನ್ನು ಬಿಸಿಲಿನಲ್ಲಿ ನಡೆಸಿದಿರಿ. 342 ಕಿ.ಮೀ. ಪಾದಯಾತ್ರೆ ಕ್ರಮಿಸಿದರೂ, ಮೀಸಲಾತಿ ಪ್ರಕ್ರಿಯೆ ಆರಂಭಿಸಿಲ್ಲ. ಇಷ್ಟು ದಿನ ಶಾಂತವಾಗಿ ನಡೆಯುತ್ತಿದ್ದ ನಮ್ಮ ಹೋರಾಟ ನಾಳೆಯಿಂದ ಬಾರಿಕೋಲು ಚಳವಳಿ ಮೂಲಕ ಕ್ರಾಂತಿ ಸ್ವರೂಪ ತಾಳಲಿದೆ. ಮುಂದಿನ ಆಗು-ಹೋಗುಗಳಿಗೆ ಸರ್ಕಾರವೇ ನೇರ ಹೊಣೆ ಎಂದು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಗುಡುಗಿದರು.**

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲು ಆಗ್ರಹಿಸಿ ಕೂಡಲ ಸಂಗಮದಿಂದ ಬೆಂಗಳೂರಿಗೆ ಪಂಚಲಕ್ಷ ಹೆಜ್ಜೆಗಳ ಐತಿಹಾಸಿಕ ಪಾದಯಾತ್ರೆ ನಡೆಸುತ್ತಿರುವ ಶ್ರೀಗಳು, ಗುರುವಾರ ಹರಿಹರದ ಗಾಂಧಿ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಸಮಾವೇಶದ ಅಧ್ಯಕ್ಷತೆ ವಹಿಸಿ ಹಕ್ಕೊತ್ತಾಯ ಮಂಡಿಸಿದರು.

ಪಂಚಮಸಾಲಿಗಳು ಹುಂಬರು, ಸಪ್ಪೆ ಬೇಳೆ ರೊಟ್ಟಿ ತಿನ್ನುವ ಮಂದಿ ಎಂದು ನೀವು ತಿಳಿದಿದ್ದೀರಿ. ಆದರೆ ಪಂಚಮಸಾಲಿಗರಲ್ಲಿ ಹರಿಯುವ ರಕ್ತ ತಾಯಿ ಚನ್ನಮ್ಮನ ರಕ್ತ. ನಾವು ಹುಟ್ಟುಹೋರಾಟಗಾರರಾದ ನಾವು, ಇದೇ ಪ್ರಥಮ ಬಾರಿಗೆ ಹೋರಾಟದ ಮೂಲಕ ಬೀದಿಗೆ ಬಂದಿದ್ದೇವೆ. ನಮ್ಮ ಸಹನೆಯ ಕಟ್ಟೆ ಒಡೆದಿದೆ. ಈ ದೇಹ ಎಂದಿಗಾದರೂ ಮಣ್ಣಲ್ಲಿ ಮಣ್ಣಾಗಿ ಗದ್ದುಗೆಯಾಗುತ್ತದೆ. ಆದರೆ ಪ್ರಾಣ ಮಾತ್ರ ಪಂಚಮಸಾಲಿ ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಋಣ ತೀರಿಸಲಿಕ್ಕಾಗಿಯೇ ಇದೆ. ಮೀಸಲಾತಿ ಪಡೆದೇ ಪೀಠಕ್ಕೆ ಹೋಗುತ್ತೇನೆ. ನನ್ನ ಗುರಿ ಬೆಂಗಳೂರಿಗೆ ತಲುಪುವುದೇ ಹೊರತು ಬೇರೆಡೆ ಹೋಗುವುದಲ್ಲ ಎಂದು ಹೇಳಿದರು.

8 ಜನ ಲಿಂಗಾಯತರು ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದಾರೆ. ಯಾವ ಮುಖ್ಯಮಂತ್ರಿಯೂ ಜಾತಿ ಆಧಾರದ ಮೇಲೆ ಸಮಾಜವನ್ನು ರಾಜಕೀಯಕ್ಕೆ ಬಳಸಿಕೊಳ್ಳಲಿಲ್ಲ. ಆದರೆ ಯಡಿಯೂರಪ್ಪನವರು ಎಲ್ಲಿ ಹೋದರೂ, ನಾನು ನಿಮ್ಮವನು, ನನಗೆ ಬೆಂಬಲ ನೀಡಿ ಎಂದು ಹೇಳುತ್ತಿದ್ದರು. ಅವರ ಮಾತು ನಂಬಿ ಸಮಾಜ ಹಾಗೂ ಸ್ವಾಮೀಜಿಗಳು ಬೆಂಬಲಿಸಿದೆವು. ಉಪವಾಸ ಸತ್ಯಾಗ್ರಹ ಮಾಡಿದಾಗ ಮೀಸಲಾತಿ ನೀಡುವುದಾಗಿ ಸಿಎಂ ಭರವಸೆ ನೀಡಿದ್ದರು. ಮಾತಿಗೆ ತಪ್ಪಿದ್ದರಿಂದ ಪಾದಯಾತ್ರೆ ಕೈಗೊಂಡಿದ್ದೇನೆ. ಪಾದಯಾತ್ರೆ ವೇಳೆ ಸಮಾಜದವರಿಗೆ ಮಂತ್ರಿ ಸ್ಥಾನ ನೀಡಿದ್ದೇನೆ. ಪಾದಯಾತ್ರೆ ಕೈ ಬಿಡಿ ಎಂದು ಮುಖ್ಯಮಂತ್ರಿಗಳು ಹೇಳಿದರು. ಆದರೆ ನಾನು ನಾನು ಮಂತ್ರಿ ಸ್ಥಾನಕ್ಕಾಗಿ ಪಾದಯಾತ್ರೆ ಮಾಡುತ್ತಿಲ್ಲ. ಮುಖ್ಯಮಂತ್ರಿ ಸ್ಥಾನಕೊಟ್ಟರೂ ಪಾದಯಾತ್ರೆ ನಿಲ್ಲಿಸುವುದಿಲ್ಲ ಎಂದು ಹೇಳಿದ್ದೇನೆ. ಮಠಕ್ಕೆ ಅನುದಾನ ಕೊಟ್ಟರೆ, ಮಂತ್ರಿಸ್ಥಾನ ಕೊಟ್ಟರೆ, ನಿಗಮಕ್ಕೆ ಅಧ್ಯಕ್ಷ ಸ್ಥಾನ ಕೊಟ್ಟರೆ ನಮಗೆ ಸಂತೋಷವಾಗಲ್ಲ. ನಮ್ಮ ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಅನುಕೂಲವಾಗಲೆಂದು ಮೀಸಲಾತಿ ಕೇಳುತ್ತಿದ್ದೇನೆ. ಅದನ್ನು ಕೊಡಬೇಕು ಎಂದು ಹೇಳಿದರು. (4ನೇ ಪುಟಕ್ಕೆ)

### ಬೆಂಬಲ ಸೂಚಿಸಿದ ಶ್ರೀಗಳ ನಿರೀಕ್ಷೆಯಲ್ಲಿದ್ದೇನೆ...

ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿಯವರು ಹರಪನಹಳ್ಳಿಗೆ ಬಂದು ನಮ್ಮ ಪಾದಯಾತ್ರೆಗೆ ಬೆಂಬಲ ಸೂಚಿಸಿದರು. ನನಗೆ ಸಂತೋಷವಾಯಿತು. ಮತ್ತೆ ಬೆಳಿಗ್ಗೆ ಗುರುಗಳು ನನ್ನ ಜೊತೆ (4ನೇ ಪುಟಕ್ಕೆ)

### ಮಠ ಕಟ್ಟುವುದಾದರೆ ಬಂಗಾರದ ಮಠವನ್ನೇ ಕಟ್ಟುತ್ತಿದ್ದೆ

ನಾವು ಮಠ ಕಟ್ಟುವ ಪ್ರಯತ್ನ ಮಾಡಿದ್ದರೆ ಬಂಗಾರದ ಮಠವನ್ನೇ ಕಟ್ಟಬಹುದಿತ್ತು. ಬಂಗಾರದ ಮಠ ಕಟ್ಟಿದವರು ಇತಿಹಾಸದಲ್ಲಿ ಉಳಿದಿಲ್ಲ. ಒಡೆದು ಹೋದ ಪಂಚಮಸಾಲಿಗರ ಮನಸ್ಸು ಕಟ್ಟಿದರೆ ಸಮಾಜ ನನ್ನ ಕಷ್ಟಕಾಲಕ್ಕೆ ಬರುತ್ತೆ ಎಂಬುದನ್ನು (4ನೇ ಪುಟಕ್ಕೆ)

### ಲಿಂಗಾಯತ ಮಠಗಳನ್ನು ಹಣ ನೀಡಿ ಖರೀದಿಸಲಾಗದು



ಹರಿಹರ, ಜ. 28- ಕೂಡಲ ಸಂಗಮ ಶ್ರೀಗಳ ಪಾದಯಾತ್ರೆ ಬೆಂಗಳೂರಿಗೆ ಹೋಗುವುದರೊಳಗೆ 2ಎ ಮೀಸಲಾತಿ ನೀಡದಿದ್ದರೆ ನಿಮ್ಮ ಮುಖ್ಯಮಂತ್ರಿ ಕುರ್ಚಿ ಖಾಲಿಯಾಗುತ್ತದೆ ಎಂದು ಕೇಂದ್ರದ ಮಾಜಿ ಸಚಿವ, ವಿಜಯಪುರ ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಹೇಳಿದರು.

ಕೂಡಲ ಸಂಗಮ ಲಿಂಗಾಯತ (4ನೇ ಪುಟಕ್ಕೆ)

### ಸ್ವಾಮೀಜಿಗಳು ರಾಜಕೀಯ ರಾಯಭಾರಿಗಳಾಗುವ ಅಗತ್ಯವಿಲ್ಲ



ಸ್ವಾಮೀಜಿಗಳು ರಾಜಕೀಯ ರಾಯಭಾರಿಗಳಾಗುವ ಅಗತ್ಯವಿಲ್ಲ. ಸಮಾಜದ ಕಣ್ತೆರೆಸುವ ಹೋರಾಟದ ಹುಲಿಯಾಗಬೇಕು. ಆ ಮೂಲಕ ಸಮಾಜದ ರಾಯಭಾರಿಯಾಗಬೇಕು ಎಂದು ಹರಿಹರ ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಹೇಳಿದರು. ಆರಂಭದಲ್ಲಿ ಅತಿಥಿಗಳನ್ನು ಸ್ವಾಗತಿಸಿ ಮಾತನಾಡಿದ ಅವರು, ಪಾದಯಾತ್ರೆ ಬಗ್ಗೆ ಅನೇಕರು ಅಣಕಿಸಿ ಮಾತಾಡಿದ್ದಾರೆ. ಹುಲಿ ಸುಮ್ಮನಿದ್ದರೆ (4ನೇ ಪುಟಕ್ಕೆ)



# ದೆಹಲಿ ಹಿಂಸೆ : ಆರೋಪಿಗಳ ವಿರುದ್ಧ ಕಠಿಣ ಕಾಯ್ದೆ

## ಕರಗಿದ ಹೋರಾಟಗಾರರ ಸಂಖ್ಯೆ, ತನಿಖೆಗೆ ವಿಶೇಷ ದಳ ರಚನೆ

ನವದೆಹಲಿ, ಜ. 28 – ಗಣರಾಜ್ಯೋತ್ಸವದ ದಿನ ನಡೆದ ಟ್ರ್ಯಾಕ್ಟರ್ ಪರೇಡ್ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ರೈತ ಮುಖಂಡರ ಪತ್ತೆಗೆ ನೋಟಿಸ್ ಕಳಿಸಿದ್ದಾರೆ ಹಾಗೂ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಕಠಿಣವಾದ ಯು.ಎ.ಪಿ.ಎ. ಮತ್ತು ದೇಶದ್ರೋಹದ ಕಾಯ್ದೆಗಳಡಿ ಪ್ರಕರಣ ದಾಖಲಿಸಿದ್ದಾರೆ.

ಘಟನೆಗಳ ಹಿಂದಿನ ಸಂಚು ಹಾಗೂ ಅಪರಾಧಿಕ ದುರುದ್ದೇಶದ ಬಗ್ಗೆ ತನಿಖೆಗಾಗಿ ಪೊಲೀಸರು ವಿಶೇಷ ದಳವನ್ನೂ ರಚಿಸಿದ್ದಾರೆ.ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಇನ್ನೂ 15 ಜನರನ್ನು ಬಂಧಿಸಲಾಗಿದೆ.

ಈ ನಡುವೆಯೇ, ರೈತರು ನಡೆಸುತ್ತಿರುವ ರಸ್ತೆ ತಡೆಯನ್ನು ತೆರವುಗೊಳಿಸಲು ಮುಂದಾಗಿರುವ ಉತ್ತರ ಪ್ರದೇಶ ಸರ್ಕಾರ, ಘಾಜಿಯಾಬಾದ್ ಮಾರ್ಗವನ್ನು ತೆರವುಗೊಳಿಸುವಂತೆ ಪ್ರತಿಭಟನಾ ನಿರತ ರೈತ ಸಂಘಟನೆಗಳಿಗೆ ತಿಳಿಸಿದೆ. ಆದರೆ, ರೈತ ಮುಖಂಡ ರಾಕೇಶ್ ಟಿಕಾಯತ್ ನೇತೃತ್ವದಲ್ಲಿ ಭಾರತೀಯ ಕಿಸಾನ್ ಯೂನಿಯನ್ ಸದಸ್ಯರು ಧರಣಿ ನಡೆಸುತ್ತಿದ್ದಾರೆ.

ಬಿಜೆಪಿ ಸ್ಥಳೀಯ ಶಾಸಕರು ಹಾಗೂ ಕಾರ್ಯಕರ್ತರು ರೈತರ ಮೇಲೆ ಹಲ್ಲೆ ನಡೆಸುತ್ತಿದ್ದಾರೆ ಎಂದು ಆರೋಪಿಸಿರುವ ಟಿಕಾಯತ್, ಗುಂಡು ಹಾರಿಸಿದರೂ ಸ್ಥಳದಿಂದ ತೆರಳುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. (2ನೇ ಪುಟಕ್ಕೆ)

# ರಾಜ್ಯಕ್ಕೆ ಕೊರೊನಾ 2ನೇ ಅಲೆ ಭೀತಿ ಇಲ್ಲ : ಸಲಹಾ ಸಮಿತಿ

ಬೆಂಗಳೂರು, ಜ.28 - ಕರ್ನಾಟಕಕ್ಕೆ ಕೊರೊನಾ ಸಾಂಕ್ರಾಮಿಕದ ಎರಡನೇ ಅಲೆ ಭೀತಿ ಸದ್ಯಕ್ಕಿಲ್ಲ. ಆದರೆ, ಎಂದಿನಂತೆ ಮುಂಜಾಗ್ರತೆ ಮುಂದುವರೆಸಬೇಕೆಂದು ತಜ್ಞ ವೈದ್ಯರ ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಸಲಹೆ ನೀಡಿದೆ.

ವಿಶ್ವದ ಕೆಲವು ರಾಷ್ಟ್ರಗಳಲ್ಲಿ ಹಾಗೂ ಭಾರತದ ಕೆಲವು ರಾಜ್ಯಗಳಲ್ಲಿ ಕೊರೊನಾ ಸೋಂಕಿನ ಎರಡನೇ ಅಲೆ ಕಾಣಿಸಿಕೊಂಡು ಜನರನ್ನು ದಿಗ್ಭ್ರಮೆಗೊಳಿಸಿತ್ತು.

ಈ ಮಹಾಮಾರಿ ಕರ್ನಾಟಕದಲ್ಲೂ ಡಿಸೆಂಬರ್‌ನಿಂದ ಫೆಬ್ರವರಿ ತಿಂಗಳಲ್ಲಿ ಕಾಣಿಸಿಕೊಳ್ಳಬಹುದು, ಈ ಬಗ್ಗೆ ಎಚ್ಚರದಿಂದ ಇರುವಂತೆ ಸಮಿತಿ ಸರ್ಕಾರಕ್ಕೆ ಎಚ್ಚರಿಕೆ ನೀಡಿತ್ತು.

ಇಂದು ತಜ್ಞರ ಸಮಿತಿ ಆರೋಗ್ಯ ಸಚಿವರ ಜೊತೆ ಕೊರೊನಾ ಬಗ್ಗೆ ವಾಸ್ತವ ಸ್ಥಿತಿಯನ್ನು ವಿವರಿಸಿದ್ದಲ್ಲದೆ, ರಾಜ್ಯಕ್ಕೆ ಸೋಂಕಿನ ಎರಡನೇ ಭೀತಿ ಇಲ್ಲ, ಆದರೆ ಈಗಿನ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಮತ್ತು ಮುಂದುವರೆಸಬೇಕು ಎಂದಿದೆ.

ಭೀತಿ ಇಲ್ಲದ ಕಾರಣ 9 ರಿಂದ 12 ನೇ ತರಗತಿವರೆಗೂ ಪೂರ್ಣದಿನ ತರಗತಿಗಳನ್ನು ಪ್ರಾರಂಭಿಸಬಹುದಾಗಿದೆ. ಈ ಹಿಂದೆ 10 ಮತ್ತು 12 ತರಗತಿ ಆರಂಭಿಸಿದ್ದರಿಂದ ಸೋಂಕು ತಗುಲಲಿಲ್ಲ ಮತ್ತು ಹರಡಲೂ ಇಲ್ಲ.

ಈ ಹಿನ್ನೆಲೆಯಲ್ಲಿ ಈ ತರಗತಿಗಳನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಿ, ಮತ್ತೆ ಫೆಬ್ರವರಿಯಲ್ಲಿ ಸಭೆ ಸೇರಿ ಅಂದಿನ ವಾಸ್ತವ ಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರುತ್ತೇವೆ.

ಅಲ್ಲಿಯವರೆಗೂ 6 ರಿಂದ 8 ನೇ ತರಗತಿಗಳಿಗೆ ಸಂಬಂಧಿಸಿದಂತೆ ವಿದ್ಯಾಗಮ ಮುಂದುವರೆಯಲಿ, ಉಳಿದ (2ನೇ ಪುಟಕ್ಕೆ)

# ಎಸ್ಸೆಸ್ಸೆಲ್ಸಿ ತಾತ್ಕಾಲಿಕ ಪರೀಕ್ಷೆ ವೇಳಾಪಟ್ಟಿ ಪ್ರಕಟ

**ಜೂನ್ 14ರಿಂದ ಪರೀಕ್ಷೆ**

ಬೆಂಗಳೂರು, ಜ.28 - 2020-21ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಕರ್ನಾಟಕ ಪ್ರೌಢಶಾಲಾ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಿಸಿದೆ.

ಸುದ್ದಿಗೋಷ್ಠಿಯಲ್ಲಿ ಪರೀಕ್ಷಾ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದ ಶಿಕ್ಷಣ ಸಚಿವ (2ನೇ ಪುಟಕ್ಕೆ)

# 9 ಮತ್ತು ಪ್ರಥಮ ಪಿಯುಗೆ ಪೂರ್ಣ ಶಾಲೆ

ಬೆಂಗಳೂರು, ಜ. 28 - 9ನೇ ತರಗತಿ ಮತ್ತು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಬರುವ ಫೆ.1ರಿಂದ ಪೂರ್ಣ ಪ್ರಮಾಣದಲ್ಲಿ ಶಾಲೆಗಳನ್ನು ಆರಂಭಿಸಲಾಗುವುದು ಎಂದು ಶಿಕ್ಷಣ ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ.

ಈ ಹಿಂದೆ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿಯುಸಿ (2ನೇ ಪುಟಕ್ಕೆ)

# ಪೊಲೀಸರಿಗೆ ಕಡ್ಡಾಯ ವಾರದ ರಜೆ

ಬೆಂಗಳೂರು, ಜ. 28 - ಪೊಲೀಸರಿಗೆ ಕಡ್ಡಾಯವಾಗಿ ವಾರದ ರಜೆ ನೀಡುವಂತೆ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯ ಪೊಲೀಸ್ ಸಿಬ್ಬಂದಿಗೆ ವಾರದಲ್ಲಿ ಒಂದು ದಿನ ಕಡ್ಡಾಯ ರಜೆ ನೀಡಬೇಕು. ತಪ್ಪಿದರೆ, ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಸುತ್ತೋಲೆಯಲ್ಲಿ ಪ್ರವೀಣ್ ಸೂದ್ ಎಚ್ಚರಿಸಿದ್ದಾರೆ.

ಈ ಹಿಂದೆಯೂ ವಾರದ ರಜೆ ನೀಡುವ ಸಂಬಂಧ ಸುತ್ತೋಲೆ ಹೊರಡಿಸಲಾಗಿತ್ತು. ಆದರೆ, ಕೆಲಸದ (2ನೇ ಪುಟಕ್ಕೆ)

## ಗುಮ್ಮನೂರು ಮಾದಿಹಳ್ಳಿ ತಿಪ್ಪಮ್ಮ ನಿಧನ



ದಾವಣಗೆರೆ ತಾಲ್ಲೂಕು ಗುಮ್ಮನೂರು ಗ್ರಾಮದ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಜಿ.ಎಂ. ಶಂಭುಲಿಂಗಪ್ಪ ಅವರ ತಾಯಿ, ಶತಾಯುಷಿ **ಶ್ರೀಮತಿ ಮಾದಿಹಳ್ಳಿ ತಿಪ್ಪಮ್ಮ** ಅವರು ದಿನಾಂಕ 28.01.2021ರ ಗುರುವಾರ ಮಧ್ಯಾಹ್ನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 105 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.01.2021ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಗುಮ್ಮನೂರು ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮಾದಿಹಳ್ಳಿ ವಂಶಸ್ಥರು, ಗುಮ್ಮನೂರು
ಮೊ. : 8549084205, 9964848556






॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಜನನ: 08.01.1941



ಲಿಂಗೈಕ್ಯ: 22.01.2021

ದಾವಣಗೆರೆ ನಗರ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ ಮಳಲ್ಕೆರೆಯ
ಡಾ॥ ಕೆ.ಆರ್. ಸೋಮಶೇಖರಪ್ಪ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 22.1.2021ನೇ ಶುಕ್ರವಾರ ಸಾಯಂಕಾಲ 5.25ಕ್ಕೆ
ನನ್ನ ಧರ್ಮಪತ್ನಿಯಾದ

**ಶ್ರೀಮತಿ ಡಿ.ಎನ್. ಜಯಮ್ಮನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ : 30.1.2021 ನೇ ಶನಿವಾರ ಬೆಳಿಗ್ಗೆ 11.00ಕ್ಕೆ ಶ್ರೀ ತರಳಬಾಳು ಸಭಾ ಭವನ (ಮಿನಿ) (ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನ ಆವರಣ) ಹದಡಿ ರಸ್ತೆ, ದಾವಣಗೆರೆ-2 ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

- ♦ ಡಾ॥ ಕೆ.ಆರ್ ಸೋಮಶೇಖರಪ್ಪ, ನಿವೃತ್ತ ವೈದ್ಯಾಧಿಕಾರಿಗಳು
- ♦ ಶ್ರೀಮತಿ ರೇಖಾ ಮತ್ತು ಕೆ.ಎಸ್ ಸುರೇಶ್, ಇಂಜಿನಿಯರ್
- ♦ ಶ್ರೀಮತಿ ಸವಿತಾ ಮತ್ತು ಡಾ॥ ವಿಜಯ್‌ಕುಮಾರ್ ಎಸ್.ಕೂಲಂಬಿ, ಪ್ರೊಫೆಸರ್, ಕೀಲು ಮೂಳೆ ವಿಭಾಗ, ಜೆ.ಜೆ.ಎಮ್. ಮೆಡಿಕಲ್ ಕಾಲೇಜು
- ♦ ಶ್ರೀಮತಿ ಗಂಗಮ್ಮ ಮತ್ತು ಕೆ.ಎಸ್.ಸತೀಶ್
- ♦ ಮೊಮ್ಮಗ : ಕೆ.ಎಸ್. ಸಿದ್ದಾರ್ಥ್, ♦ ಮೊಮ್ಮಗಳು: ರಿಷಿಕಾ ಕೂಲಂಬಿ

ಕೂಲಂಬಿ ವಂಶಸ್ಥರು, ಮಳಲಕೆರೆ ಗ್ರಾಮಸ್ಥರು ಮತ್ತು ಬಂಧು-ಮಿತ್ರರು.

91457 29942, 94481 13460, 78990 07878

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.

# ನಗರ ಪ್ರದೇಶದ ಜನರಿಗೂ ಶುದ್ಧ ಕುಡಿಯುವ ನೀರಿನ ಘಟಕ



ಹೊನ್ನಾಳಿ ಪಟ್ಟಣ ಪಂಚಾಯಿತಿ ಆಯ-ವ್ಯಯ ಪೂರ್ವಭಾವಿ ಸಭೆಯಲ್ಲಿ ಪ.ಪಂ. ಅಧ್ಯಕ್ಷ ಕೆ.ವಿ. ಶ್ರೀಧರ್

ಹೊನ್ನಾಳಿ, ಜ.28- ಶುದ್ಧ ಕುಡಿಯುವ ನೀರಿನ ಘಟಕ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿದ್ದು ನಗರ ಪ್ರದೇಶದ ಜನರಿಗೂ ಶುದ್ಧ ಕುಡಿಯುವ ನೀರು ಘಟಕದ ನೀರನ್ನು ಕೊಡಲಾಗುವುದು ಎಂದು ಪ.ಪಂ. ಅಧ್ಯಕ್ಷ ಕೆ.ವಿ. ಶ್ರೀಧರ್ ಹೇಳಿದರು.

ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಇಂದು ನಡೆದ 2021-22 ಸಾಲಿನ ಅಂದಾಜು ಆಯ-ವ್ಯಯ ಸಾರ್ವಜನಿಕ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಟ್ಟಣದಲ್ಲಿ ಈಗಾಗಲೇ ಒಂದು ಶುದ್ದ ನೀರಿನ ಘಟಕ ಪ್ರಾರಂಭವಾಗಿದ್ದು ಕೆಲವೇ ದಿನಗಳಲ್ಲಿ ನಾಗರಿಕರಿಗೆ ಶುದ್ದ ನೀರು ಕೊಡಲಾಗುವುದು ಮತ್ತು ತುಂಗಭದ್ರಾ ಬಡಾವಣೆ ಹಳೆ ಸೌದೆ ಡಿಪೋ ಕಡೆಗಳಲ್ಲಿ ಶುದ್ಧ ನೀರು ಘಟಕ ಪ್ರಾರಂಭಿಸಲಾಗುವುದು ಎಂದು ನಾಗರಿಕರಿಗೆ ಭರವಸೆ ನೀಡಿದ ಅವರು, ಪಟ್ಟಣದ ಕನಕ ರಂಗಮಂದಿರ ನವೀಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಪಟ್ಟಣದ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಲಾಗುವುದು ಎಂದರು.

ಸಾರ್ವಜನಿಕರ ಪ್ರಶ್ನೆಗೆ ಉತ್ತರಿಸಿದ ಮುಖ್ಯಾಧಿಕಾರಿ ಎಸ್.ಆರ್ ವೀರಭದ್ರಯ್ಯ, ಪಟ್ಟಣದಲ್ಲಿ ಕುಡಿಯುವ ನೀರಿಗೆ 50 ಹೆಚ್.ಪಿ. ಮೋಟಾರ್‌ನಿಂದ ನೀರು ಸರಬರಾಜಾಗುತ್ತಿದ್ದು, ನಾಗರಿಕರಿಗೆ ನೀರಿನ ಸಮಸ್ಯೆ ಇರುವುದರಿಂದ ಪ.ಪಂ. ನಿಂದ ಹೆಚ್ಚುವರಿಯಾಗಿ 100 ಹೆಚ್.ಪಿ. ಮೋಟಾರ್ 5 ಹೊಸ ಟ್ಯಾಂಕ್‌ಗಳು ಹೆಚ್ಚುವರಿ ಪೈಪ್‌ಲೈನ್‌ಗಳಿಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ನಗರ ಪ್ರದೇಶದ ನಿವೇಶನ ರಹಿತರಿಗೆ ಶಾಸಕ ರೇಣುಕಾಚಾರ್ಯ ಶಿಫಾರಸ್ಸಿನಂತೆ ಮಲ್ಲದೇವರಕಟ್ಟೆ ಬಳಿ ಸರ್ಕಾರದಿಂದ 10 ಎಕರೆ ಜಮೀನು ಮಂಜೂರಾಗಿದ್ದು, ನಿವೇಶನ ರಹಿತರಿಗೆ ನಿವೇಶನ ನೀಡಲಾಗುವುದು.

ಪ.ಪಂ. ಸದಸ್ಯ ಮೈಲಪ್ಪ, ಸಮುದಾಯ ಸಂಘಟನಾಧಿಕಾರಿ ಸಿ.ಅಶೋಕ್, ರಾಮಚಂದ್ರಪ್ಪ ಕಂದಾಯಾಧಿಕಾರಿ, ಎನ್. ಪಿಸೆ ರಂಜಿತ, ಇಂಜಿನಿಯರ್ ಸಿ ದೇವರಾಜ, ಸಭೆಯಲ್ಲಿ ಕತ್ತಿಗೆ ನಾಗರಾಜ್, ಕರವೇ ಶ್ರೀನಿವಾಸ್, ಯೋಗೀಶ್, ಕೋಟೆ ನಂದೀಶ್, ಪ್ರವೀಣ್, ಬೀರಪ್ಪ ಮತ್ತು ಇತರರು ಇದ್ದರು.

## ಕೊರೊನಾ ವೈರಸ್ ಮಟ್ಟವಾಗಿದೆ : ವರ್ಧನ್

### 146 ಜಿಲ್ಲೆಗಳಲ್ಲಿ 7 ದಿನಗಳಿಂದ ಒಂದೂ ಸೋಂಕಿಲ್ಲ

ನವದೆಹಲಿ, ಜ. 28 - ದೇಶದಲ್ಲಿ ಕೊರೊನಾ ವೈರಸ್ ಹಾವಳಿ ಮಟ್ಟಗೊಳಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ತಿಳಿಸಿದ್ದು, 146 ಜಿಲ್ಲೆಗಳಲ್ಲಿ ಕಳೆದ ಏಳು ದಿನಗಳಿಂದ ಒಂದೂ ಕೊರೊನಾ ಪ್ರಕರಣ ಪತ್ತೆಯಾಗಿಲ್ಲ ಎಂದಿದ್ದಾರೆ.

18 ಜಿಲ್ಲೆಗಳಲ್ಲಿ ಕಳೆದ ಹದಿನಾಲ್ಕು ದಿನಗಳಿಂದ ಒಂದೂ ಪ್ರಕರಣ ಪತ್ತೆಯಾಗಿಲ್ಲ. ಆರು ಜಿಲ್ಲೆಗಳಲ್ಲಿ 21 ದಿನಗಳಿಂದ ಪತ್ತೆಯಾಗಿಲ್ಲ. 21 ಜಿಲ್ಲೆಗಳಲ್ಲಿ ಕಳೆದ 28 ದಿನಗಳಿಂದ ಒಂದೂ ಕೊರೊನಾ ಪ್ರಕರಣಗಳು ಪತ್ತೆಯಾಗಿಲ್ಲ ಎಂದವರು ತಿಳಿಸಿದ್ದಾರೆ.

ದೇಶದಲ್ಲಿ 700ಕ್ಕೂ ಹೆಚ್ಚು ಜಿಲ್ಲೆಗಳಿದ್ದು, ಇವುಗಳ ಪೈಕಿ ಶೇ.20ರಷ್ಟರಲ್ಲಿ ಕಳೆದ ಒಂದು ವಾರದಿಂದ ಯಾವುದೇ ಪ್ರಕರಣ ಪತ್ತೆಯಾಗಿಲ್ಲ ಎಂದವರು ಹೇಳಿದ್ದಾರೆ.

ದೇಶದಲ್ಲಿ ಪ್ರತಿದಿನ 12 ಲಕ್ಷ ಕೊರೊನಾ ಪರೀಕ್ಷೆ ನಡೆಸುವ ಸಾಮರ್ಥ್ಯ ಈಗ ದೊರೆತಿದೆ. ಪ್ರಸಕ್ತ ದೇಶದಲ್ಲಿ 1.73 ಲಕ್ಷ ಸಕ್ರಿಯ ಕೊರೊನಾ ಪ್ರಕರಣಗಳಿವೆ. ಇದು ಒಟ್ಟು ಕೊರೊನಾ ಸೋಂಕಿನ ಶೇ.0.46ರಷ್ಟಾಗಿದೆ ಎಂದವರು ಹೇಳಿದ್ದಾರೆ.

## 9 ಮತ್ತು ಪಿಯುಗೆ ಪೂರ್ಣ ಶಾಲೆ

(1ನೇ ಪುಟದಿಂದ) ವಿದ್ಯಾರ್ಥಿಗಳಿಗೆ ಮಾತ್ರ ಪೂರ್ಣ ಪ್ರಮಾಣದ ತರಗತಿಗಳನ್ನು ಆರಂಭಿಸಲಾಗಿತ್ತು. ಆರರಿಂದ 9ನೇ ತರಗತಿಯ ಮಕ್ಕಳಿಗೆ ವಿದ್ಯಾಗಮ ನಡೆಸಲಾಗುತ್ತಿದೆ.

ಸರ್ಕಾರದ ನಿರ್ಧಾರದಿಂದಾಗಿ 9ರಿಂದ ಎರಡನೇ ಪಿಯು ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದ ಶಾಲಾ ಕಲಿಕೆ ಲಭ್ಯವಾಗಲಿದೆ.

6 ರಿಂದ 8ನೇ ತರಗತಿಗಳನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸುವ ಬಗ್ಗೆ ಸ್ವಲ್ಪ ದಿನ ಕಾದು ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಸಚಿವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.


1 ರಿಂದ 5ನೇ ತರಗತಿಗಳನ್ನು ಆರಂಭಿಸುವ ಬಗ್ಗೆ ಸದ್ಯಕ್ಕೆ ಯಾವುದೇ ತೀರ್ಮಾನವಿಲ್ಲ. ಉಳಿದ ತರಗತಿಗಳನ್ನು ಆರಂಭಿಸುವ ಬಗ್ಗೆ ಮುಂದೆ ನಿರ್ಧರಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ.

## ಪೊಲೀಸರಿಗೆ ಕಡ್ಡಾಯ ವಾರದ ರಜೆ

(1ನೇ ಪುಟದಿಂದ) ಒತ್ತಡದಿಂದಾಗಿ ಠಾಣಾಧಿಕಾರಿಗಳು ಸಿಬ್ಬಂದಿಗೆ ರಜೆ ನೀಡುತ್ತಿರಲಿಲ್ಲ. ಈ ಬಗ್ಗೆ ಸಿಬ್ಬಂದಿ ದೂರು ನೀಡಿದ ನಂತರ ಕಡ್ಡಾಯ ವಾರದ ರಜೆಗೆ ಸುತ್ತೋಲೆ ಹೊರಡಿಸಲಾಗಿದೆ.

## ರಾಣೇಬೆನ್ನೂರಿನಲ್ಲಿ ಇಂದು 29 ಗ್ರಾ.ಪಂ ಅಧ್ಯಕ್ಷ - ಉಪಾಧ್ಯಕ್ಷರ ಆಯ್ಕೆ

ರಾಣೇಬೆನ್ನೂರು ತಾಲ್ಲೂಕಿನ ಗುಡಗೂರು, ಹರನಗಿರಿ, ಸೋಮಲಾಪುರ, ಮೆಡ್ಲೇರಿ, ರಾಹುತನಕಟ್ಟಿ, ಹಿರೇಬಿದರಿ, ಅರೇಮಲ್ಲಾಪುರ, ಬೇಲೂರು, ನದಿಹರಳಹಳ್ಳಿ, ಕೋಡಿಯಾಲ, ಕವಲೆತ್ತು, ಕರೂರು, ಚಳಗೇರಿ, ಕಮದೋಡ ಇಟಗಿ, ಮುದೇನೂರ, ಮಾಕನೂರ, ಲಿಂಗದಹಳ್ಳಿ, ಹಲಗೇರಿ, ಹೆಡಿಯಾಲ, ನಿಟ್ಟೂರು, ಬೆನಕನಕೊಂಡ, ಉಕ್ಕುಂದ, ಕಾಕೋಳ, ಕಜ್ಜರಿ, ಗುಡ್ಡಗುಡ್ಡಾಪೂರ, ಗುಡ್ಡದಾನ್ವೇರಿ, ಹನುಮಾಪುರ, ಹೊನ್ನತ್ತಿಗಳ ಒಟ್ಟು 29 ಗ್ರಾಮ ಪಂಚಾಯ್ತಿಗಳ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಇಂದು ನಡೆಯಲಿದೆ.



### ಕೊಟ್ಟೂರಿನಲ್ಲಿ ಬನಶಂಕರಿ ದೇವಿ ರಥೋತ್ಸವ

ಕೊಟ್ಟೂರಿನ ಕೌಲುಪೇಟೆ ಶ್ರೀ ಬನಶಂಕರಿ ದೇವಿಯ ರಥೋತ್ಸವವು ಗುರುವಾರ ಸಡಗರ - ಸಂಭ್ರಮದಿಂದ ಜರುಗಿತು. ಸಾವಿರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದ್ದರು.

## ದೆಹಲಿ ಹಿಂಸೆ : ವಿರುದ್ಧ ಕಠಿಣ ಕಾಯ್ದೆ

(1ನೇ ಪುಟದಿಂದ) ಉತ್ತರ ಪ್ರದೇಶದ ಘಾಜಿಪುರದಲ್ಲಿ ಯಾವುದೇ ಹಿಂಸಾಚಾರ ನಡೆದಿಲ್ಲ. ಆದರೂ ರಾಜ್ಯ ಸರ್ಕಾರ ದಮನಕಾರಿಯಾಗಿ ವರ್ತಿಸುತ್ತಿದೆ. ಇದು ಉತ್ತರ ಪ್ರದೇಶ ಸರ್ಕಾರವನ್ನು ಬಟಾ ಬಯಲು ಮಾಡಿದೆ ಎಂದು ಟಿಕಾಯತ್ ತಿಳಿಸಿದ್ದಾರೆ.

ಮೂರು ರೈತ ಸಂಘಟನೆಗಳು ಈಗಾಗಲೇ ಪ್ರತಿಭಟನೆಯಿಂದ ಹಿಂದೆ ಸರಿದಿವೆ. ಇದರ ಬೆನ್ನಲ್ಲೇ ಪ್ರತಿಭಟನಾ ನಿರತರು ಹೆದ್ದಾರಿ ಖಾಲಿ ಮಾಡಲು ಘಾಜಿಯಾಬಾದ್ ಆಡಳಿತ ತಿಳಿಸಿದೆ. ಮಧ್ಯರಾತ್ರಿಯೊಳಗೆ ಸ್ಥಳ ತೆರವುಗೊಳಿಸಲು ಮೌಖಿಕ ಸೂಚನೆ ನೀಡಲಾಗಿದೆ ಎಂದು ಜಿಲ್ಲೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ನಡುವೆ, ಮಂಗಳವಾರ ಕೆಂಪು ಕೋಟೆಯ ಮೇಲೆ ಸಿಖ್ ಧ್ವಜ ಹಾರಿಸಿದ ಪ್ರಕರಣದ ತನಿಖೆಯನ್ನು ವಿಸ್ತರಿಸಿರುವ ದೆಹಲಿ ಪೊಲೀಸರು, ಭಾರತವಷ್ಟೇ ಅಲ್ಲದೇ ಹೊರ ದೇಶಗಳಲ್ಲಿರುವ ಸಂಘಟನೆಗಳು ಹಾಗೂ ರೈತರು ಹೊಂದಿರುವ ಪಾತ್ರದ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ 33 ಎಫ್.ಐ.ಆರ್.ಗಳನ್ನು ದಾಖಲಿಸಲಾಗಿದೆ. 44 ಜನರ ಪತ್ತೆಗೆ ನೋಟಿಸ್ ಕಳಿಸಿದ್ದು, ಇವರಲ್ಲಿ ಬಹುತೇಕರು ರೈತ ಮುಖಂಡರಾಗಿದ್ದಾರೆ.

ಹಿಂಸಾಚಾರಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗುತ್ತಿರುವ ನಡುವೆ, ಪ್ರತಿಭಟನೆ ಉಳಿಸಿಕೊಳ್ಳುವ ಯತ್ನ ನಡೆಸಿರುವ ಮುಖಂಡರು, ಗುರುವಾರದಂದು ಸಿಂಘು ಗಡಿಯಿಂದ ಸದ್ಭಾವನಾ ರ್‍ಯಾಲಿ ನಡೆಸಿದ್ದಾರೆ. ರಾಜೇವಾಲ್ ದಲ್‌ಜೀತ್ ಸಿಂಗ್, ದರ್ಶನ್ ಪಾಲ್ ಹಾಗೂ ಗುರ್ನಾಮ್ ಸಿಂಗು ಚಡುನಿ ಸೇರಿದಂತೆ ಹಲವರು ರ್‍ಯಾಲಿ ನೇತೃತ್ವ ವಹಿಸಿದ್ದರು. ಸಿಂಘುವಿನಿಂದ ಆರಂಭವಾಗಿ ಕುಂಡ್ಲಿ - ಮನೇಸರ್ ಪಲ್ವಾಲ್ ಹೆದ್ದಾರಿವರೆಗೆ 16 ಕಿ.ಮೀ. ರ್‍ಯಾಲಿ ನಡೆಸಲಾಯಿತು.

ಹಿಂಸಾಚಾರದ ನಂತರ ಸಿಂಘು ಹಾಗೂ ಟಿಕ್ರಿ ಗಡಿಗಳಲ್ಲಿ ಪ್ರತಿಭಟನಾ ನಿರತರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಗಣರಾಜ್ಯೋತ್ಸವ ಸಂದರ್ಭದಲ್ಲಿ ಹೋರಾಟದಲ್ಲಿ ಪಾಲ್ಗೊಳ್ಳಲು ಬಂದ ಸಾಕಷ್ಟು ಜನರು ವಾಪಸ್ಸಾಗಿದ್ದಾರೆ ಎಂದು ರೈತ ಮುಖಂಡರು ಹೇಳಿದ್ದಾರೆ.

## ನಗರದ ಇಂದು ಅವಭೃತ ಸ್ನಾನ

ಹಳೇಬೇತೂರು ರಸ್ತೆ ಶಾಸ್ತ್ರೀ ಕಣದಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಅವಭೃತ ಸ್ನಾನ ಏರ್ಪಡಿಸಿದೆ.

## ರಾಜ್ಯಕ್ಕೆ ಕೊರೊನಾ 2ನೇ ಅಲೆ ಭೀತಿ ಇಲ್ಲ : ಸಲಹಾ ಸಮಿತಿ

(1ನೇ ಪುಟದಿಂದ) ತರಗತಿಗಳನ್ನು ಆರಂಭಿಸುವ ಸಂಬಂಧ ಮುಂದೆ ತೀರ್ಮಾನ ತಿಳಿಸುತ್ತೇವೆ. ಆಫ್ ಲೈನ್ ಮತ್ತು ಆನ್ ಲೈನ್ ಆಯ್ಕೆ ಮುಂದುವರೆಯಲಿ, ವಿದ್ಯಾರ್ಥಿಗಳಿಗೆ ಹಾಜರಾತಿ ಕಡ್ಡಾಯ ಬೇಡ ಎಂದು ತಿಳಿಸಿದೆ.

## ನಗರದಲ್ಲಿ ಇಂದು ಸಂಧ್ಯಾವಂದನೆ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಫೆಬ್ರವರಿ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

## ಎಸ್ಸೆಸ್ಸೆಲ್ಸಿ ಪರೀಕ್ಷೆ ವೇಳಾಪಟ್ಟಿ ಪ್ರಕಟ

(1ನೇ ಪುಟದಿಂದ) ಸುರೇಶ್ ಕುಮಾರ್, ಜೂನ್ 14ರಿಂದ ಜೂನ್ 25ರ ವರೆಗೆ ಎಸ್ಸೆಸ್ಸೆಲ್ಸಿ ಬೋರ್ಡ್ ಪರೀಕ್ಷೆ ನಡೆಸಲಿದೆ ಎಂದು ತಿಳಿಸಿದ್ದಾರೆ.

ಜೂನ್ 14ರಂದು ಪ್ರಥಮ ಭಾಷೆ, ಜೂನ್ 16 ಗಣಿತ, ಜೂನ್ 18ರಂದು ಇಂಗ್ಲೀಷ್ ಹಾಗೂ ಕನ್ನಡ, ಜೂನ್ 21 ರಂದು ವಿಜ್ಞಾನ, ಜೂನ್ 23 ರಂದು ಹಿಂದಿ ಹಾಗೂ ಜೂನ್ 25ರಂದು ಸಮಾಜ ವಿಜ್ಞಾನ ಪರೀಕ್ಷೆ ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ. ಇದು ತಾತ್ಕಾಲಿಕ ವೇಳಾಪಟ್ಟಿಯಾಗಿದ್ದು ಆಕ್ಷೇಪಣೆ ಇದ್ದಲ್ಲಿ ಮನವಿ ಸಲ್ಲಿಕೆ ಮಾಡಬಹುದು ಎಂದವರು ಹೇಳಿದ್ದಾರೆ.

### ಜ್ಯೋತಿಷಿ ಮಂಜುನಾಥ ನಿಧನ




ದಾವಣಗೆರೆ ನಿಟುವಳ್ಳಿ-ಮೌನೇಶ್ವರ ಬಡಾವಣೆಯಲ್ಲಿರುವ ಶ್ರೀ ಮೌನೇಶ್ವರ ದೇವಸ್ಥಾನದ ಜ್ಯೋತಿಷಿ ಎಸ್‌ಎಂ. ಮಂಜುನಾಥ (34) ಇವರು ದಿನಾಂಕ 28.01.2021ರ ಗುರುವಾರ ಮಧ್ಯಾಹ್ನ 2.30 ಕ್ಕೆ ನಿಧನರಾದರು. ಮೃತರ ಅಂತ್ಯಕ್ರಿಯೆಯು ದಿನಾಂಕ 29.01.2021ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಆರ್.ಹೆಚ್. ಬೃಂದಾವನದಲ್ಲಿ ನಡೆಯಲಿದೆ.

### ಮಲೇಬೆನ್ನೂರು ಪಟ್ಟಣದ ದಂಡಿ ಲಲಿತಮ್ಮ ನಿಧನ



ಮಲೇಬೆನ್ನೂರು ಪಟ್ಟಣದ ಬಸವೇಶ್ವರ ಬಡಾವಣೆ ವಾಸಿ ಹಾಲಿವಾಣದ ದಂಡಿ ಹನುಮಂತಪ್ಪ ಇವರ ಧರ್ಮಪತ್ನಿ ಹಾಗೂ ಎಸ್‌ಬಿಕೆಎಂ ಶಾಲೆಯ ಮುಖ್ಯ ಶಿಕ್ಷಕಿ, ದಂಡಿ ತಿಪ್ಪೇಸ್ವಾಮಿ ಅವರ ಅತ್ತಿಗೆಯವರಾದ ಶ್ರೀಮತಿ ಲಲಿತಮ್ಮ (64) ಇವರು ದಿನಾಂಕ 28.01.2021ರ ಗುರುವಾರ ಮಧ್ಯಾಹ್ನ 2.45ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯಂದಿರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.01.2021 ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಮಲೇಬೆನ್ನೂರಿನಲ್ಲಿ ನೆರವೇರಲಿದೆ.


### ಸವಿನೆನಪು



ಆರ್.ಬಿ. ಕೊಟ್ರೇಶ್
(ಅಶೋಕ ಗ್ಯಾರೇಜ್)

ನೀವು ನಮ್ಮನ್ನಗಲಿ ಇಂದಿಗೆ ಹದಿಮೂರು ವರ್ಷಗಳಾಗಿದ್ದು, ಸದಾ ನಿಮ್ಮ ನೆನಪು ನಮ್ಮಲ್ಲಿ ಹಸಿರಾಗಿದೆ. ತಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ಪತ್ನಿ : ಮಂಜುಳಮ್ಮ
ಮಕ್ಕಳಾದ : ಆನಂದ, ರೂಪ, ಬಸವರಾಜ, ದೀಪ
ಸೊಸೆಯಂದಿರಾದ : ಶೈಲಾ, ಕಾವ್ಯ
ಅಳಿಯಂದಿರು : ಓಂ ಪ್ರಕಾಶ್, ಶಿವಕುಮಾರ್
ಮೊಮ್ಮಕ್ಕಳು : ಯಮುನ, ಚಿತ್ರ, ದಕ್ಷ, ಕಾರ್ತಿಕ್, ಕುಮುದ, ಯಶಸ್ವಿನಿ, ತೇಜಸ್ವಿನಿ, ನೇಹ, ವಿನಯ್.

### 13ನೇ ವರ್ಷದ ಪುಣ್ಯಸ್ಮರಣೆ



ಕೂಲಂಬಿ ಇಂ॥ ಮಾಳಕ್ಕಳ ಗುಡುದಪ್ಪನವರು
ರಿ॥ ಎ.ಇ.ಇ., ಕೆ.ಪಿ.ಟಿ.ಸಿ.ಎಲ್

ನೀವು ನಮ್ಮನ್ನಗಲಿ ಇಂದಿಗೆ 13 ವರ್ಷಗಳಾದರೂ ಸದಾ ತಮ್ಮ ಪ್ರಾಮಾಣಿಕತೆ, ಸಜ್ಜನತೆ, ಆದರ್ಶಗಳೇ ನಮಗೆ ದಾರಿದೀಪವಾಗಿವೆ. ಸದಾ ನಿಮ್ಮ ಸ್ಮರಣೆಯಲ್ಲಿರುವ......
ಶ್ರೀಮತಿ ನಾಗರತ್ನ ಡಾ॥ ಸುರೇಶ್ ಗುಡುದಪ್ಪ ಮಾಳಕ್ಕಳಮನೆ,
Technical Manager/ Sr Scientist,EBE
Kingdom of Saudi Arabia
ಕು॥ ವೈಷ್ಣವಿ, ಚಿ॥ ದಿಗಂತ್, ಚಿ॥ ಚಿನ್ಮಯ್
ಮಾಳಕ್ಕಳಮನೆ ವಂಶಸ್ಥರು, ಕೂಲಂಬಿ.

### ಶ್ರದ್ಧಾಂಜಲಿ



ದಿನಾಂಕ 28.01.2021ರಂದು ನಿಧನರಾದ
ಶ್ರೀ ಅಮರೇಶ್ವರ ಟ್ರೇಡಿಂಗ್ ಕಂಪನಿ ಮಾಲೀಕರಾದ
ಶ್ರೀ ವೀರಸಂಗಪ್ಪ (ರಾಜು)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಎಸ್.ಜಿ. ಉಳವಯ್ಯ.
ಶ್ರೀ ಚನ್ನಬಸವೇಶ್ವರ ರೈಸ್ ಟೆಕ್, ಶ್ರೀ ಭುವನೇಶ್ವರಿ ಆಗ್ರೋ ಇಂಡಸ್ಟ್ರೀಸ್, ರಾಜು ಏಜೆನ್ಸೀಸ್, ದಾವಣಗೆರೆ.

### ಬಳಗನೂರು ವೀರಸಂಗಪ್ಪ (ರಾಜು) ನಿಧನ



ದಾವಣಗೆರೆಯ ಅಕ್ಕಿ ವರ್ತಕರಾಗಿದ್ದ ದಿ॥ ಬಳಗನೂರು ರಾಮನಗೌಡ್ರು ಇವರ ಮಗ, ಶ್ರೀ ಅಮರೇಶ್ವರ ಟ್ರೇಡಿಂಗ್ ಕಂಪನಿ ಮಾಲೀಕರಾದ
ಶ್ರೀ ಬಳಗನೂರು ವೀರಸಂಗಪ್ಪ (ಗೌಡ್ರು, ರಾಜು)
ಅವರು ದಿನಾಂಕ 28.01.2021ರ ಗುರುವಾರ ರಾತ್ರಿ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 46 ವರ್ಷ ವಯಸ್ಸಾಗಿತ್ತು.
ತಾಯಿ, ಪತ್ನಿ, ಮಕ್ಕಳು, ಸಹೋದರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.01.2021ರ ಶುಕ್ರವಾರ ಬೆಳಿಗ್ಗೆ 8.30 ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ


### ಮೂಲೆಮನೆ ಗಂಗಮ್ಮ ಓಂಕಾರಪ್ಪ ನಿಧನ



ದಾವಣಗೆರೆ ತಾಲ್ಲೂಕು ಅಣ್ಣಾಪುರ ಗ್ರಾಮದ ವಾಸಿ, ದಿ॥ ಮೂಲೆಮನೆ ಓಂಕಾರಪ್ಪನವರ ಧರ್ಮಪತ್ನಿ
ಶ್ರೀಮತಿ ಗಂಗಮ್ಮ
ಅವರು ದಿನಾಂಕ 28.01.2021ರ ಗುರುವಾರ ಸಂಜೆ 6.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 103 ವರ್ಷ ವಯಸ್ಸಾಗಿತ್ತು. ಐವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.01.2021ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಅಣ್ಣಾಪುರ ಗ್ರಾಮದಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ
ಮೊ. : 97415 59125, 99000 40638

॥ಶ್ರೀಗುರು ಕೊಟ್ಟೂರೇಶ್ವರ ಪ್ರಸನ್ನ॥

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಮಾಯಕೊಂಡದ ಮೂಲೆಮನೆ ಶ್ರೀಮತಿ ಶಾರದಮ್ಮ ಇವರು ಮಾಡುವ ವಿಜ್ಞಾಪನೆಗಳು.
ನನ್ನ ಪೂಜ್ಯ ಪತಿಯವರಾದ
ಶ್ರೀ ಎಂ.ಟಿ.ತಿಪ್ಪೇಸ್ವಾಮಿ
ಇವರು ದಿನಾಂಕ 21.01.2021 ರ ಗುರುವಾರದಂದು ಬೆಳಿಗ್ಗೆ 8.20ಕ್ಕೆ ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 29.01.2021ನೇ ಶುಕ್ರವಾರದಂದು ಮಧ್ಯಾಹ್ನ 12.00ಕ್ಕೆ ಮೃತರ ಸ್ವಗೃಹ ಶಾರದ ನಿವಾಸ #1718/35/ಡಿ1/ಎ, ಅಜ್ಜಂಪುರ ಶೆಟ್ರು ಲೇಔಟ್, ಕೆ.ಬಿ. ಬಡಾವಣೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಮಾಯಕೊಂಡದ ಮೂಲೆಮನೆ ಶ್ರೀಮತಿ ಶಾರದಮ್ಮ ತಿಪ್ಪೇಸ್ವಾಮಿ ಮತ್ತು ಮಕ್ಕಳು ಹಾಗೂ ಮೂಲೇಮನೆ ವಂಶಸ್ಥರು.
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28.01.2021ರಂದು ನಿಧನರಾದ ಅಕ್ಕಿ ವ್ಯಾಪಾರಸ್ಥರಾದ
ಶ್ರೀ ವೀರಸಂಗಪ್ಪ (ರಾಜು)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.
✦ ಕೋರಿ ಹಿರಿಯಣ್ಣ, ಅಕ್ಕಿ ವ್ಯಾಪಾರಸ್ಥರು,
✦ ಕೋರಿ ಸಿದ್ದೇಶ್ ✦ ಕೋರಿ ಶಿವಕುಮಾರ್
✦ ಸುಧಾಕರ್, ಮಧು ಟ್ರಾನ್ಸ್‌ಪೋರ್ಟ್ಸ್ ✦ ಸತೀಶ್ ಬಾಬು
✦ ಎಂ.ಡಿ. ದೊಡ್ಡಪ್ಪ ✦ ಎಂ.ಜೆ. ನಾಗೇಂದ್ರ ✦ ಜಿ.ಎಂ.ಬಿ. ಬಸವರಾಜ
✦ ವೈ.ಆರ್. ಬಾಬು ✦ ವೈ.ಆರ್. ರುದ್ರೇಶ್ ✦ ರಕ್ಕಸಗಿ ಶರಣಪ್ಪ

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28.01.2021ರಂದು ನಿಧನರಾದ
ಶ್ರೀ ಅಮರೇಶ್ವರ ಟ್ರೇಡಿಂಗ್ ಕಂಪನಿ ಮಾಲೀಕರೂ,
ಅಕ್ಕಿ ವ್ಯಾಪಾರಸ್ಥರೂ, ನಮ್ಮ ಆತ್ಮೀಯರೂ ಆದ
ಶ್ರೀ ಬಿ.ಆರ್. ರಾಜು (ಗೌಡ್ರು)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
✦ ಹೆಚ್.ಎಂ. ನಾಗರಾಜ್ (HMN) ✦ ಬಿ. ಸೋಮಣ್ಣ (BBS)
✦ ಸಿ. ರುದ್ರೇಶ್ (CR) ✦ ಎ. ರಮೇಶ್ (AR)
✦ ಎಸ್.ಎಂ. ವೀರೇಶ್ (SMV)
✦ ಎಂ.ಹೆಚ್. ಪರಶುರಾಮ್ (MHP) ✦ ಜಿ. ನಾಗರಾಜ್ (GN)
✦ ಎನ್.ಜಿ. ಶಿವಣ್ಣ (NGS) ✦ ಎಸ್. ನಾಗರಾಜ್ (SN)
✦ ಸಿ. ಸಂಗಣ್ಣ (CSA) ✦ ಬಿ.ಎಂ. ವೀರಣ್ಣ (BMV)
✦ ಎಸ್. ಮಹೇಶ್ (SST) ✦ ಬಿ. ರಾಜು (NGS)
✦ ಹೆಚ್.ಎಂ. ತಿಪ್ಪೇರುದ್ರೇಶ್ (ತಿಪ್ಪೇಶ್) ✦ ಹೆಚ್.ಎಂ. ಶ್ರೀಶೈಲ
ಮತ್ತು ಅಕ್ಕಿ, ಭತ್ತ ವರ್ತಕರುಗಳು

### ಭಾವಪೂರ್ಣ ಶ್ರದ್ಧಾಂಜಲಿ



ದಿ : 28-1-21ರಂದು ನಿಧನರಾದ ಆತ್ಮೀಯರಾದ
ಶ್ರೀ ವೀರಸಂಗಪ್ಪ ಗೌಡ್ರು (ರಾಜು)
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಎಂ.ಬಿ.ಪ್ರಕಾಶ್ – ಮಣಿಕಂಠ ಟ್ರೇಡರ್ಸ್
ಎನ್.ಬಿ.ವೀರೇಶ್ – ಅಯ್ಯಪ್ಪ ಟ್ರೇಡರ್ಸ್
ಎ.ಪಿ.ಎಂ.ಸಿ. ಮಾರ್ಕೆಟ್, ದಾವಣಗೆರೆ

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28.01.2021ರಂದು ನಿಧನರಾದ ಶ್ರೀ ಅಮರೇಶ್ವರ ಟ್ರೇಡಿಂಗ್ ಕಂಪನಿ ಮಾಲೀಕರಾದ
ಶ್ರೀ ವೀರಸಂಗಪ್ಪ (ರಾಜು)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
✦ ಕೆ.ಪಿ. ಮುರುಗೇಶ್ (ಕೊಡೇಕಲ್) ✦ ಶ್ರೀಕಾಂತ್ (ವಾಸವಿ)
✦ ನಾಗರಾಜ (ಎಂ.ಎಂ. & ಸನ್ಸ್) ✦ ಗುರುರಾಜ ಕೆ.ವಿ. (ಕೊಡೇಕಲ್)
✦ ಮಲ್ಲಿಕಾರ್ಜುನ್ (ಹಾಲುವರ್ತಿ) ✦ ವಿರೂಪಾಕ್ಷಿ (NMK)
✦ ರಾಜು (NGS) ✦ ರವಿ (ಕಂದಗಲ್) ✦ ವೀರೇಶ್ ಪಟೇಲ್
✦ ಮುರುಗೇಶ್ (ಗಂಗಾ ಪೈಪ್ಸ್) ✦ ಕೆ.ಜಿ. ಚನ್ನಬಸಪ್ಪ (ಕೊಡೇಕಲ್)
✦ ವೀರೇಶ್ (ಬೊಮ್ಮಣ್ಣ) ✦ ರಾಜು (ಎಂ.ಎಂ.ಕೆ.) ✦ ಸತೀಶ್ (ಕೋರಿ)
✦ ವೀರೇಶ್ (SPT) ✦ ಅಣ್ಣಪ್ಪ ಎಂ.ಎನ್. ✦ ಜಯಂತಿಲಾಲ್
✦ ಚಂದ್ರು ಹೆಚ್.ಎಂ. ✦ ನಾಗರಾಜ ಕೆ.ಪಿ. (ಕೊಡೇಕಲ್)
✦ ಪ್ರಕಾಶ್ ಕೆ.ಪಿ. (ಕೊಡೇಕಲ್) ✦ ಕಂಚಿಕೇರಿ ಬಸವರಾಜ್

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28.01.2021ರಂದು ನಿಧನರಾದ ಅಕ್ಕಿ ವ್ಯಾಪಾರಸ್ಥರಾದ
ಶ್ರೀ ವೀರಸಂಗಪ್ಪ (ರಾಜು)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
✦ ದೇವರಮನಿ ಶಿವಕುಮಾರ್, ಮಹಾನಗರ ಪಾಲಿಕೆ ಸದಸ್ಯರು
✦ ಎಂ.ವಿ.ಜಯಪ್ರಕಾಶ್ ಮಾಗಿ ✦ ಕೈಲಾಸ್ ಬಾಬು ಮಾಗಿ
✦ ವಿ.ಸಿದ್ದೇಶ್ (ವಿನಾಯಕ ರೈಸ್‌ಮಿಲ್) ✦ ವೀರ ಹನುಮಾನ್ ಆಗ್ರೋ ರೈಸ್ ಟೆಕ್
✦ ಬಿ.ಪಿ.ಜಗದೀಶ್ ಬ್ಯಾಡಗಿ ✦ ಮಾಳಗಿ ಪಾರಪ್ಪ ✦ ಮಾಳಗಿ ಷಣ್ಮುಖ
✦ ಹಲುವಾಗಲು ರುದ್ರೇಶ್ ✦ ಜಯರಾಜ್ ಮೇಟಿ
✦ ಸತೀಶ್ ಹುಬ್ಬಳ್ಳಿ ✦ ಶ್ರೀ ಪವಾಡ ಬಸವೇಶ್ವರ ಟ್ರೇಡರ್ಸ್
✦ ಪಿ.ಎಸ್.ಪರಶುರಾಮ್ ✦ ಎಂ.ವೈ. ಆನಂದ್, ಹುಚ್ಚಂಗಮ್ಮ ಟ್ರೇಡರ್ಸ್
✦ ಬಿ.ವಿ.ವೀರಣ್ಣ (NMK) ✦ ವೈ.ಆರ್.ಬಾಬು
✦ ಹರ್ಷ ಕಮರ್ಷಿಯಲ್ಸ್ ✦ ಜೆ.ಪಿ. ಎಂಟರ್‌ಪ್ರೈಸಸ್ ✦ ರೈಸ್ ಕಾರ್ನರ್
ಚೌಕಿಪೇಟೆ, ಗುಜರಿ ಲೈನ್ ಅಕ್ಕಿ ನುಚ್ಚಿನ ವರ್ತಕರು, ಬ್ರೋಕರ್‌ಗಳು, ದಾವಣಗೆರೆ.

# ಪ್ರಚೋದನಕಾರಿ ಟಿವಿ ಕಾರ್ಯಕ್ರಮ ತಡೆಯದ ಕೇಂದ್ರಕ್ಕೆ ಸುಪ್ರೀಂ ತರಾಟೆ

ನವದೆಹಲಿ, ಜ. 28 - ಪ್ರಚೋದನಕಾರಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಟಿವಿ ಕಾರ್ಯಕ್ರಮಗಳನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ರೈತರ ಪ್ರತಿಭಟನೆ ಹಿಂಸಾತ್ಮಕಗೊಂಡು ಅಂತರ್ಜಾಲಕ್ಕೆ ಕತ್ತರಿ ಹಾಕಿದ್ದನ್ನು ಪ್ರಸ್ತಾಪಿಸಿರುವ ಸುಪ್ರೀಂ ಕೋರ್ಟ್, ನ್ಯಾಯೋಚಿತವಾದ ಹಾಗೂ ಸತ್ಯದ ವರದಿಗಾರಿಕೆಯ ಅಗತ್ಯವಿದೆ ಎಂದು ಹೇಳಿದೆ.

ಪ್ರಚೋದನಕಾರಿಯಾಗುವ ಟಿವಿ ಕಾರ್ಯಕ್ರಮಗಳಿವೆ ಎಂಬುದು ವಾಸ್ತವ. ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ಹೇಳಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯ ಅವರಿದ್ದಾರೆ.


ಕಳೆದ ವರ್ಷ ಕೊರೊನಾ ಆರಂಭದ ಸಂದರ್ಭದಲ್ಲಿ ದೆಹಲಿಯಲ್ಲಿ ನಡೆದ ತಬ್ಲೀಗ್ ಜಮಾತ್ ಕಾರ್ಯಕ್ರಮದ ಬಗ್ಗೆ ಕೆಲ ವಾಹಿನಿಗಳು ಸುದ್ದಿ ಪ್ರಸಾರ ಮಾಡಿದ ರೀತಿಯನ್ನು ಪ್ರಶ್ನಿಸಿ ಹಲವಾರು ಅರ್ಜಿಗಳು ದಾಖಲಾಗಿವೆ.

ಈ ರೀತಿಯ ಪ್ರಚೋದನಕಾರಿ ಕಾರ್ಯಕ್ರಮಗಳಿವೆ. ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ನಿನ್ನೆ ರೈತರು ದೆಹಲಿಗೆ ಬಂದ ಸಂದರ್ಭದಲ್ಲಿ ಅಂತರ್ಜಾಲ ಹಾಗೂ ಮೊಬೈಲ್ ಸೇವೆ ಬಂದ್ ಮಾಡಿದ್ದಿರಿ. ನಾನು ವಿವಾದ ರಹಿತವಾದ ಪದ ಬಳಸುತ್ತಿದ್ದೇನೆ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ.

ಈ ಸಮಸ್ಯೆಗಳು ಎಲ್ಲಿ ಬೇಕಾದರೂ ಉದ್ಭವಿಸಬಹುದು. ನಿನ್ನೆ ಟಿವಿಯಲ್ಲಿ ಏನಾಯಿತು ಎಂಬುದು ನನಗೆ ಗೊತ್ತಿಲ್ಲ ಎಂದೂ ಅವರು ಹೇಳಿದ್ದಾರೆ.

# ಅಕ್ರಮ ನಲ್ಲಿಗಳನ್ನು ಸಕ್ರಮಗೊಳಿಸಲು ಶುಲ್ಕ ನಿಗದಿ

## ಹರಪನಹಳ್ಳಿ ಪುರಸಭೆ ತುರ್ತು ಸಾಮಾನ್ಯ ಸಭೆಯಲ್ಲಿ ತೀರ್ಮಾನ



ಹರಪನಹಳ್ಳಿ, ಜ.28- ಅಕ್ರಮ ನಲ್ಲಿಗಳನ್ನು ಸಕ್ರಮ ಗೊಳಿಸಲು 3500 ರೂ. ಶುಲ್ಕ ನಿಗದಿಗೆ ಇಲ್ಲಿ ನಡೆದ ಪುರಸಭಾ ತುರ್ತು ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಯಿತು.

ಪಟ್ಟಣದಲ್ಲಿ 4900 ಅಕ್ರಮ ನಳಗಳಿವೆ, ಸಕ್ರಮಗೊಳಿಸಲು 5 ಸಾವಿರ ರೂ.ಗಳನ್ನು ನಿಗದಿ ಮಾಡಬೇಕು ಎಂದು ಕಂದಾಯ ಅಧಿಕಾರಿ ಹೇಳಿದಾಗ ಹಿರಿಯ ಸದಸ್ಯರಾದ ಡಿ.ಅಬ್ದುಲ್ ರಹಿಮಾನ್, ಎಂ.ವಿ. ಅಂಜಿನಪ್ಪ, ಟಿ. ವೆಂಕಟೇಶ್, ಗೊಂಗಡಿ ನಾಗರಾಜ್ ಅವರುಗಳು ಆಕ್ಷೇಪ ವ್ಯಕ್ತ ಪಡಿಸಿ ಸಾಮಾನ್ಯ ಜನರಿಗೆ ಹೊರೆಯಾಗುತ್ತದೆ. ಕಡಿಮೆ ಮಾಡಿ ಎಂದು ಹೇಳಿ ನಂತರ ಚರ್ಚೆಯಾಗಿ ಅಂತಿಮವಾಗಿ 3500 ರೂ. ಶುಲ್ಕ ನಿಗದಿಗೆ ನಿರ್ಣಯ ಕೈಗೊಳ್ಳಲಾಯಿತು.

ಪುರಸಭಾ ಕಚೇರಿಯಲ್ಲಿ ಕಂದಾಯ ವಿಭಾಗದಲ್ಲಿ ಬಹಳಷ್ಟು ಸಮಸ್ಯೆಗಳು ಇದ್ದು, ಫೈಲ್‌ಗಳು ವಿಲೇವಾರಿಯಾಗಲು ಬಹಳಷ್ಟು ತಡವಾಗುತ್ತಲಿದೆ ಎಂದು ಎಂ.ವಿ.ಅಂಜಿನಪ್ಪ ಆರೋಪಿಸಿದರು. ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಸಭೆ ನಡೆಸಲು ಬಿಡುವುದಿಲ್ಲ ಎಂದು ಅವರು ಎಚ್ಚರಿಸಿದರು.

ಸದಸ್ಯರು ಕೊಟ್ಟ ಅರ್ಜಿಗಳಿಗೆ ಸ್ಪಂದನೆ ಸಿಗುವುದಿಲ್ಲ ಎಂದು ಸದಸ್ಯ ಜಾಕೀರ್ ಸರ್ಖಾವಾಸ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನಮ್ಮದೇ ಹೀಗಾದರೆ ಸಾರ್ವಜನಿಕರ ಪಾಡೇನು ? ಎಂದು ಅವರು ಪ್ರಶ್ನಿಸಿದರು. ಸದಸ್ಯರನ್ನು ಪುರಸಭಾ ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಅವರು ದೂರಿದರು.

ಗೊಂಗಡಿ ನಾಗರಾಜ್ ಸಹ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಕಾರ್ಯವೈಖರಿ ಖಂಡಿಸಿದರು. ಎಚ್.ಎಂ. ಅಶೋಕ್ ಅವರು ಪುರಸಭಾ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ, ಮುಖ್ಯಾಧಿಕಾರಿಗಳು ವಾರ್ಡ್‌ಗಳ ಭೇಟಿ ಮಾಡಿ ಸಮಸ್ಯೆಗಳನ್ನು ಪರಿಶೀಲಿಸಿ ಪರಿಹಾರ ನೀಡಬೇಕು ಎಂದು ಅವರು ತಾಕೀತು ಮಾಡಿದರು.

ಮಹಿಳಾ ಸದಸ್ಯರಾದ ಲಕ್ಕಮ್ಮ, ಯಲ್ಲಮ್ಮ, ತಾರಾ ಅವರುಗಳು ತಮ್ಮ ತಮ್ಮ ವಾರ್ಡ್‌ಗಳಲ್ಲಿ ಬೀದಿ ದೀಪ, ಚರಂಡಿ, ನೀರಿನ ಸಮಸ್ಯೆ ಕುರಿತು ಗಮನ ಸೆಳೆದು ಕೂಡಲೇ ಸಮಸ್ಯೆ ನೀಗಿಸಿ ಎಂದು ಕೋರಿದರು.

ತೋಪಿನ ವೆಂಕಟೇಶ್ ಅವರು ವಾರ್ಡ್‌ಗಳಲ್ಲಿ ವಿವಿಧ ಸಮಸ್ಯೆಗಳಿವೆ.ಆದ್ದರಿಂದ ತಿಂಗಳಿಗೊಮ್ಮೆ ಸಭೆ ಕರೆಯಬೇಕು. ಹೀಗೆ ಬಹಳ ದಿನಗಳ ನಂತರ ಸಭೆ ಕರೆದು ಒಮ್ಮೆಲೇ 19 ವಿಷಯಗಳನ್ನು ಚರ್ಚೆಗೆ ತಂದರೆ ಹೇಗೆ ? ಎಂದು ಪ್ರಶ್ನಿಸಿದರು. ಆಗ ಅಧ್ಯಕ್ಷ ಮಂಜುನಾಥ್ ಇಜಂತಕರ್ ಅವರು ಮುಂದೆ ಪ್ರತಿ ತಿಂಗಳು ಸಭೆ ಕರೆಯುತ್ತೇವೆ. ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಭರವಸೆ ನೀಡಿದರು.

ಗಣರಾಜ್ಯೋತ್ಸವ ಸಮಾರಂಭದಲ್ಲಿ ಪುರಸಭಾ ಅಧ್ಯಕ್ಷರನ್ನು, ಸದಸ್ಯರುಗಳನ್ನು ನಿರ್ಲಕ್ಷ್ಯ ಮಾಡಲಾಗಿದೆ. 9 ಗಂಟೆಗೆ ಧ್ವಜಾರೋಹಣವಿದ್ದರೆ 10 ಗಂಟೆಗೆ ಆಹ್ವಾನ ಪತ್ರಿಕೆ ತಂದು ಕೊಟ್ಟಿದ್ದಾರೆ ಹಾಗೂ ಶಿಷ್ಟಾಚಾರ ಪಾಲಿಸಿಲ್ಲ ಎಂದು ಎಂ.ವಿ.ಅಂಜಿನಪ್ಪ, ಅಬ್ದುಲ್ ರಹಿಮಾನ್, ರಾಘವೇಂದ್ರಶೆಟ್ಟಿ, ವೆಂಕಟೇಶ್, ಗೊಂಗಡಿ ನಾಗರಾಜ್ ಆರೋಪಿಸಿದರು.

ಅಧ್ಯಕ್ಷ ಮಂಜುನಾಥ ಇಜಂತಕರ್, ಉಪಾ ಧ್ಯಕ್ಷರಾದ ನಿಟ್ಟೂರು ಭೀಮವ್ವ ಸಣ್ಣಹಾಲಪ್ಪ, ಮುಖ್ಯಾಧಿಕಾರಿ ಬಿ.ಆರ್. ನಾಗರಾಜನಾಯ್ಕ ಇದ್ದರು.

# ಮಹಾನಾಯಕ ಧಾರಾವಾಹಿಯಿಂದ ಯುವ ಸಮುದಾಯದಲ್ಲಿ ಜಾಗೃತಿ



## ಜಗಳೂರು

ಜಗಳೂರು, ಜ.28 - ಡಾ.ಬಿ ಆರ್ ಅಂಬೇಡ್ಕರ್ ಅವರ ಮಹಾನಾಯಕ ಧಾರಾವಾಹಿ ವಿದ್ಯಾರ್ಥಿ ಯುವ ಸಮುದಾಯಕ್ಕೆ ಜಾಗೃತಿ ಮೂಡಿಸುತ್ತಿದೆ ಎಂದು ಪೊಲೀಸ್ ವೃತ್ತ ನಿರೀಕ್ಷಕ ಡಿ.ದುರುಗಪ್ಪ ತಿಳಿಸಿದರು. ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಮಹಾನಾಯಕ ಅಂಬೇಡ್ಕರ್ ಫ್ಲೆಕ್ಸ್ ಅನಾವರಣಗೊಳಿಸಿ ಮಾತನಾಡಿದರು.

ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನ ರಚಿಸುವ ಮೂಲಕ ವಿಶ್ವಮಾನವರಾಗಿದ್ದಾರೆ. ಅಂಬೇಡ್ಕರ್ ಅವರ ಆದರ್ಶ ಮೌಲ್ಯಗಳು ನಮಗೆ ದಾರಿ ದೀಪವಾಗಬೇಕು ಎಂದರು.

ಪ.ಪಂ ಮುಖ್ಯಾಧಿಕಾರಿ ರಾಜು.ಡಿ.ಬಣಕಾರ್ ಮಾತನಾಡಿ, ಗ್ರಾಮೀಣ ಭಾಗಗಳಲ್ಲಿ ಮಹಾನಾಯಕ ಧಾರಾವಾಹಿಯನ್ನು ಪ್ರತಿಯೊಬ್ಬರೂ ವೀಕ್ಷಿಸಿ ಜಾಗೃತರಾಗಬೇಕು ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ. ಮಾತನಾಡಿ, ಅಂಬೇಡ್ಕರ್ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸದೆ ಎಲ್ಲರೂ ಗೌರವಿಸಬೇಕು ಸರ್ವರೂ ಒಗ್ಗೂಡಿ ಪ್ರತಿ ಗ್ರಾಮಗಳಲ್ಲಿ ಫ್ಲೆಕ್ಸ್ ಅನಾವರಣ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ. ಪ್ರಗತಿಪರ ಸಂಘಟನೆ ಮುಖಂಡರಾದ ಆರ್. ಓಬಳೇಶ್, ಲೋಕೇಶ್.ಬಿ, ಸತೀಶ್ ಮಲೆಮಾಚಿಕೆರೆ, ಧನ್ಯಕುಮಾರ್, ಎಂ.ರಾಜಪ್ಪ ಮಾದಿಹಳ್ಳಿ, ಕೆ.ಮಂಜಪ್ಪ, ಹನುಮಂತಪ್ಪ, ಅನಂತರಾಜ್, ಅಂಜಿನಪ್ಪ ತಮಲೇಹಳ್ಳಿ, ಸತ್ಯಮೂರ್ತಿ, ಚಂದ್ರಪ್ಪ, ಕುಬೇಂದ್ರಪ್ಪ ಮುಂತಾದವರು ಉಪಸ್ಥಿತರಿದ್ದರು.


# ಲಂಕಾಗೆ ಐದು ಲಕ್ಷ ಲಸಿಕೆ ಕೊಡುಗೆ

ಕೊಲಂಬೊ, ಜ. 28 – ಶ್ರೀಲಂಕಾಗೆ ಭಾರತ ಐದು ಲಕ್ಷ ಕೊವಿಶೀಲ್ಡ್ ಲಸಿಕೆಗಳನ್ನು ಕೊಡುಗೆಯಾಗಿ ನೀಡಿದ್ದು, ಇದಕ್ಕಾಗಿ ಲಂಕಾದ ಅಧ್ಯಕ್ಷ ರಾಜಪಕ್ಷೆ ಧನ್ಯವಾದ ಸಲ್ಲಿಸಿದ್ದಾರೆ. ಶ್ರೀಲಂಕಾ ಹಾಗೂ ಇತರೆ ಏಳು ದೇಶಗಳಿಗೆ ಲಸಿಕೆ ನೀಡುವುದಾಗಿ ಭಾರತ ಕಳೆದ ವಾರ ಪ್ರಕಟಿಸಿತ್ತು.

ನೇಪಾಳ, ಬಾಂಗ್ಲಾದೇಶ, ಭೂತಾನ್ ಹಾಗೂ ಮಾಲ್ಡೀವ್ಸ್‌ಗಳಿಗೆ ಈಗಾಗಲೇ ಲಸಿಕೆ ತಲುಪಿಸಲಾಗಿದೆ. ಮ್ಯಾನ್ಮಾರ್, ಆಫ್ಘಾನಿಸ್ತಾನ ಹಾಗೂ ಮಾರಿಷಸ್‌ಗಳಿಗೂ ಲಸಿಕೆ ನೀಡಲಾಗುವುದು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲಸಿಕೆಗಳನ್ನು ಸ್ವಾಗತಿಸಿದ ಅಧ್ಯಕ್ಷ ರಾಜಪಕ್ಷೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಭಾರತೀಯರಿಗೆ ಧನ್ಯವಾದ ಸಲ್ಲಿಸಿದ್ದಾರೆ.

# ಜೆಡಿಎಸ್ ಹಿರಿಯ ಶಾಸಕ ಮನಗೂಳಿ ನಿಧನ



ಬೆಂಗಳೂರು, ಜ.28 - ಮಾಜಿ ಸಚಿವರೂ ಆಗಿರುವ ಜೆಡಿಎಸ್ ಶಾಸಕ ಮಲ್ಲಪ್ಪ ಚನ್ನವೀರಪ್ಪ ಮನಗೂಳಿ ನಿಧನ ಹೊಂದಿದ್ದಾರೆ. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಇಂದು ಬೆಳಗಿನ ಜಾವ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಪುತ್ರಿ ಹಾಗೂ ಪುತ್ರರನ್ನು ಅಗಲಿದ್ದಾರೆ. ಮೂಲತಃ ಕೃಷಿಕರಾಗಿದ್ದ ಅವರು, ಪಂಚಾಯತ್ ರಾಜ್ ಇಲಾಖೆಯಲ್ಲಿ ಗ್ರಾಮ ಸೇವಕರಾಗಿ, ಜನರಿಂದ ಮನ್ನಣೆ ಪಡೆದು 1994ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು.

2018ರಲ್ಲಿ ಎರಡನೇ ಬಾರಿ ಆಯ್ಕೆಯಾಗಿ ಕುಮಾರಸ್ವಾಮಿ ಸರ್ಕಾರದಲ್ಲಿ ತೋಟಗಾರಿಕೆ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದಾಗಲೂ ಜೆ.ಎಚ್.ಪಟೇಲ್ ಸರ್ಕಾರದಲ್ಲಿ ಪಂಚಾಯತ್ ರಾಜ್ ಸಚಿವರಾಗಿ ಸೇವೆ ಸಲ್ಲಿಸಿದ್ದರು.

# ಕೃಷಿ ಕಾಯ್ದೆ : ಕೇಂದ್ರ ಸರ್ಕಾರಕ್ಕೆ ಸರ್ವೋಚ್ಚ ನ್ಯಾಯಾಲಯ ನೋಟಿಸ್

ನವದೆಹಲಿ, ಜ. 28 - ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕೃಷಿ ಕಾಯ್ದೆಗಳನ್ನು ಪ್ರಶ್ನಿಸಿ ಕಾಂಗ್ರೆಸ್ ಸಂಸದ ಟಿ.ಎನ್. ಪ್ರತಾಪನ್ ಅವರು ಸರ್ವೋಚ್ಚ ನ್ಯಾಯಾಲಯ ಅರ್ಜಿ ದಾಖಲಿಸಿದ್ದು, ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ನೋಟಿಸ್ ಕಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಹಾಗೂ ನ್ಯಾಯಮೂರ್ತಿ ಎ. ಎಸ್.ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸುತ್ತಿದ್ದು, ಕೇಂದ್ರ ಸರ್ಕಾರಕ್ಕೆ ನೋಟಿಸ್ ಕಳಿಸಿದೆ. ಕೇರಳದ ತ್ರಿಸ್ಸೂರಿನ ಸಂಸದರಾಗಿರುವ ಪ್ರತಾಪನ್, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಾಯ್ದೆಗಳು ಸಂವಿಧಾನ ಬಾಹಿರ ಹಾಗೂ ಕಾನೂನು ಬಾಹಿರ ಎಂದಿದ್ದಾರೆ.

# ನೆರೆ ದೇಶಗಳಿಗೆ 55 ಲಕ್ಷ ಲಸಿಕೆ ವಿತರಣೆ

ನವದೆಹಲಿ, ಜ. 28 – ಭಾರತ ತನ್ನ ನೆರೆಯ ದೇಶಗಳಿಗೆ 55 ಲಕ್ಷಕ್ಕೂ ಹೆಚ್ಚು ಕೊರೊನಾ ಲಸಿಕೆಗಳನ್ನು ವಿತರಿಸಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಈ ಬಗ್ಗೆ ಪತ್ರಕರ್ತರಿಗೆ ಮಾಹಿತಿ ನೀಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅನುರಾಗ್ ಶ್ರೀವಾಸ್ತವ, ಭಾರತದ ಲಸಿಕೆಗಳನ್ನು ಪಡೆಯಲು ಹಲವು ದೇಶಗಳು ಉತ್ಸುಕವಾಗಿವೆ. ಜಾಗತಿಕವಾಗಿ ಕೊರೊನಾ ವಿರುದ್ಧ ಹೋರಾಡಲು ಲಸಿಕೆ ಪೂರೈಕೆಗೆ ಪರಿಗಣಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಗುರುವಾರ ಶ್ರೀಲಂಕಾಗೆ 5 ಲಕ್ಷ ಹಾಗೂ ಬಹರೇನ್‌ಗೆ ಒಂದು ಲಕ್ಷ ಲಸಿಕೆಗಳನ್ನು ರವಾನಿಸಲಾಗಿತ್ತು.

ಜನವರಿ 20ರ ನಂತರ ನಾವು 55 ಲಕ್ಷ ಲಸಿಕೆಗಳನ್ನು ನಮ್ಮ ನೆರೆಯ ದೇಶಗಳಿಗೆ ಹಾಗೂ ವಿಸ್ತೃತ ನೆರೆಹೊರೆಯವರಿಗೆ ನೀಡಿದ್ದೇವೆ ಎಂದು ಶ್ರೀವಾಸ್ತವ ತಿಳಿಸಿದ್ದಾರೆ.

ಭೂತಾನ್‌ಗೆ 1.5 ಲಕ್ಷ, ಮಾಲ್ಡೀವ್ಸ್‌ಗೆ ಒಂದು ಲಕ್ಷ, ನೇಪಾಳ ಹಾಗೂ ಬಾಂಗ್ಲಾ ದೇಶಗಳಿಗೆ ಕ್ರಮವಾಗಿ 10 ಮತ್ತು 20 ಲಕ್ಷ ಲಸಿಕೆಗಳನ್ನು ನೀಡಲಾಗಿದೆ. ಮ್ಯಾನ್ಮಾರ್‌ಗೆ 15 ಲಕ್ಷ, ಮಾರಿಷಸ್‌ಗೆ 1 ಲಕ್ಷ ಹಾಗೂ ಸಿಯಾಚಿಲ್ಲೀಸ್‌ಗೆ 50 ಸಾವಿರ ಲಸಿಕೆಗಳನ್ನು ನೀಡಲಾಗಿದೆ.

ಈ ದೇಶಗಳ ಮನವಿಯ ಮೇರೆಗೆ ಲಸಿಕೆ ಪೂರೈಸಲಾಗಿದೆ ಎಂದವರು ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಓಮನ್‌ಗೆ ಒಂದು ಲಕ್ಷ, ಕ್ಯಾರಿಕಾಮ್ ದೇಶಗಳಿಗೆ ಐದು ಲಕ್ಷ ಹಾಗೂ ನಿಕರಾಗುವಾಗೆ ಎರಡು ಲಕ್ಷ ಲಸಿಕೆಗಳನ್ನು ನೀಡಲಾಗುವುದು.

ಪೆಸಿಫಿಕ್ ದ್ವೀಪ ದೇಶಗಳೂ ಎರಡು ಲಕ್ಷ ಲಸಿಕೆ ಪಡೆಯಲಿವೆ ಎಂದೂ ಅವರು ಹೇಳಿದ್ದಾರೆ.

# ಪೇದೆಗಳಿಂದ 20 ಗುಂಡು ಕಸಿದ ಪ್ರತಿಭಟನಾಕಾರರು

ನವದೆಹಲಿ, ಜ. 28 – ಗಣರಾಜ್ಯೋತ್ಸವದ ದಿನ ಕೆಂಪು ಕೋಟೆಯ ಮೇಲೆ ನಡೆಸಲಾದ ಹಿಂಸಾಚಾರದ ವೇಳೆ ಪ್ರತಿಭಟನಾಕಾರರು ಇಬ್ಬರು ಪೇದೆಗಳಿಂದ 20 ಸಜೀವ ಗುಂಡುಗಳಿರುವ ಎರಡು ಮ್ಯಾಗಜೀನ್‌ಗಳನ್ನು ಕಸಿದುಕೊಂಡಿದ್ದಾರೆ ಎಂದು ಘಟನೆಗೆ ಸಂಬಂಧಿಸಿದಂತೆ ದಾಖಲಿಸಲಾದ ಎಫ್.ಐ.ಆರ್.ನಲ್ಲಿ ತಿಳಿಸಲಾಗಿದೆ.

ಉತ್ತರ ದೆಹಲಿಯ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. ಕೆಂಪು ಕೋಟೆಯಲ್ಲಿ ನಡೆದ ಹಿಂಸಾಚಾರದಲ್ಲಿ 141 ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ತಿಳಿಸಲಾಗಿದೆ.

ಪ್ರತಿಭಟನಾಕಾರರು ಬಂದೂಕುಗಳನ್ನು ಕಸಿಯುವ ಪ್ರಯತ್ನ ನಡೆಸಿದರು. ಆದರೆ, ಇಬ್ಬರು ಪೇದೆಗಳು ಅದಕ್ಕೆ ಅವಕಾಶ ನೀಡಲಿಲ್ಲ. ಆದರೆ, ಗುಂಡುಗಳನ್ನು ರಕ್ಷಿಸಿಕೊಳ್ಳಲು ಆಗಲಿಲ್ಲ ಎಂದು ತಿಳಿಸಲಾಗಿದೆ.




## ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

ದಿನಾಂಕ 31.01.2021ನೇ ಭಾನುವಾರ ನಡೆಯಲಿರುವ 2020-21 ರಿಂದ 2022-23 ನೇ ಸಾಲಿಗೆ (3 ವರ್ಷ ಅವಧಿಗೆ) ಮಾನ್ಯ **ಶ್ರೀ ಯು.ಜಿ. ಶಿವಕುಮಾರ್** ಇವರ ನೇತೃತ್ವದಲ್ಲಿ ಕಾರ್ಯಕಾರಿ ಮಂಡಳಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿ ಮತ್ತು ಚಿಹ್ನೆಗಳ ವಿವರ

| ಕ್ರ.ಸಂ. | ಉಮೇದುದಾರರ ಹೆಸರು | ಸ್ಥಾನ | ಭಾವಚಿತ್ರ | ಗುರುತು | ಮೊಹರು |
|---|---|---|---|---|---|
| 2 | ಶಿವಕುಮಾರ ಯು.ಜಿ. | ಅಧ್ಯಕ್ಷ | | | |
| 3 | ವೀರಣ್ಣ ಐ.ವಿ. (ಐನಳ್ಳಿ) | ಉಪಾಧ್ಯಕ್ಷ | | | |
| 1 | ರವಿಶಂಕರ್ ಪಲ್ಲಾಗಟ್ಟೆ | ಗೌರವ ಕಾರ್ಯದರ್ಶಿ | | | |
| 2 | ನಾಗರಾಜ್ ಕೆ.ಬಿ. | ಗೌರವ ಸಹ ಕಾರ್ಯದರ್ಶಿ | | | |
| 1 | ಪುಟ್ಟಪ್ಪ ಕಾಶಿಪುರ | ಕೋಶಾಧ್ಯಕ್ಷ | | | |
| ನಿರ್ದೇಶಕರ ಸ್ಥಾನಗಳು | | | | | |
| 1 | ಅಭಿಷೇಕ್ ಬಿ.ಜೆ. (ಬೇತೂರು) | | | | |
| 5 | ತಿಮ್ಮರಾಜ ಗುಪ್ತಾ ಎಸ್.ಕೆ. | | | | |
| 6 | ನಾಗರಾಜ ಬಿ.ಜಿ. (ಬಸವಾಪಟ್ಟಣ) | | | | |
| 9 | ಪಟೇಲ್ ಬಿ.ಪಿ. (ಕಾರಿಗನೂರು ಬಸವೇಶ) | | | | |
| 10 | ಬೆಳ್ಳೂಡಿ ಸದಾನಂದ | | | | |
| 11 | ಮಲ್ಲಿಕಾರ್ಜುನ ಬಾದಾಮಿ | | | | |

ಕಬ್ಲ್‌ನ ಸರ್ವತೋಮುಖ ಅಭಿವೃದ್ಧಿ ಹಾಗೂ ನಿಮ್ಮ ಸ್ಪಂದನೆಗೆ ಶ್ರಮಿಸಲಿ ನಮ್ಮ ಗುಂಪಿನ 11 ಜನ ಅಭ್ಯರ್ಥಿಗಳಿಗೂ ಮತ ಚಲಾಯಿಸುವುದರ ಮೂಲಕ ಆಶೀರ್ವದಿಸಿ ಜಯಶೀಲರನ್ನಾಗಿ ಮಾಡಲು ವಿನಮ್ರ ವಿನಂತಿ ಮಾಡಿಕೊಳ್ಳುತ್ತಿದ್ದೇವೆ.

ಮತದಾನದ ದಿನಾಂಕ : 31-01-2021ನೇ ಭಾನುವಾರ
ಮತದಾನ ಸಮಯ : ಬೆಳಿಗ್ಗೆ 9-00 ರಿಂದ ಮಧ್ಯಾಹ್ನ 3-00 ರವರೆಗೆ
ಮತದಾನದ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

ವಿ.ಸೂ. : ಕಡ್ಡಾಯವಾಗಿ ಮಾಸ್ಕ್ ಧರಿಸಿಕೊಂಡು, ಮತ ಚಲಾಯಿಸಿ.

ಬನ್ನಿ... ಕೈ ಜೋಡಿಸಿ

*ನಿಮ್ಮ ಮತ, ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆಗೆ ಹಿತ*

# ನೀಡದಿದ್ದರೆ ಹೋರಾಟಕ್ಕೆ ಕ್ರಾಂತಿಯ ರೂಪ




**(1ನೇ ಪುಟದಿಂದ)** ಬೀದಿಗಿಳಿದ ಸ್ವಾಮೀಜಿ ಬೆಂಬಲಿಸುತ್ತಾರೋ ಅಥವಾ ತಂಪಾದ ಸ್ಥಳದಲ್ಲಿರುವ ಸ್ವಾಮೀಜಿ ಜೊತೆ ಇರುತ್ತಾರೋ ಎಂಬ ಚಿಂತೆ ಇತ್ತು. ಆದರೆ ಪಂಚಮಸಾಲಿ ಮಂದಿ ಕಾಯಕ ಮಾಡುವವರಿಗೆ ಮಾತ್ರ ಗೌರವ ಕೊಡುತ್ತಾರೆ. ಬಣ್ಣದ ಮಾತುಗಳನ್ನಾಡುವವರಿಗೆ ಗೌರವ ಕೊಡುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದೀರಿ. ಆರಂಭದ ಹೆಜ್ಜೆ ಇಡುವಾಗ ಪಂಚಮಸಾಲಿ ನಾಯಕರು ಕೊರಳಿಗೆ ಹಾರ ಹಾಕಿ ಮುಂದೆ ಬಿಡುತ್ತಾರೆ. ಕಷ್ಟವಾಗುತ್ತದೆ ಎಂದು ಅನೇಕರು ಹೇಳಿದ್ದರು. ಆದರೆ ಸಮಾಜ ನನ್ನ ಕೈ ಬಿಡಲಿಲ್ಲ. ಪಾದಯಾತ್ರೆಗೆ ಅಭೂತಪೂರ್ವ ಬೆಂಬಲ ಸಿಕ್ಕಿದೆ ಎಂದು ಶ್ರೀಗಳು ಸಂತಸ ವ್ಯಕ್ತಪಡಿಸಿದರು.

ಬೆಳಗಾವಿ ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ್ ಮಾತನಾಡುತ್ತಾ, ಇತಿಹಾಸದ ಪುಟದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹ ಹೋರಾಟವಾಗುತ್ತದೆ. ಖಂಡಿತಾ ಶ್ರೀಗಳ ಹೋರಾಟಕ್ಕೆ ಯಶಸ್ಸು ಸಿಗುತ್ತದೆ ಎಂದು ಹೇಳಿದರು.

ರಾಣೇಬೆನ್ನೂರು ವಕೀಲ ಶಿವಲಿಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ನಂದಿಗುಡಿ ನೊಳಂಬ ಮಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಪದ್ಮಶಾಲಿ ಸಮಾಜದ ಶ್ರೀ ಪ್ರಭುಲಿಂಗ ಸ್ವಾಮೀಜಿ, ಬಾಳೇಹೊಸೂರಿನ ಶ್ರೀ ದಿಂಗಾಲೇಶ್ವರ ಸ್ವಾಮೀಜಿ, ಮಾಜಿ ಸಂಸದ ಶಿವರಾಮನಗೌಡ, ಕುನ್ನೂರು, ದಾವಣಗೆರೆ ಪಾಲಿಕೆ ಮೇಯರ್ ಬಿ.ಜಿ.ಅಜಯ್ ಕುಮಾರ್, ಶ್ರೀಮತಿ ವೀಣಾ ಕಾಶೆಂಪೂರ, ನಂದಿಹಳ್ಳಿ ಹಾಲಪ್ಪ, ಬೇವಿನಮರದ, ರವಿಕಾಂತ ಪಾಟೀಲ್, ಪಿ.ಸಿ. ಸಿದ್ದನಗೌಡ್ರು, ಪ್ರಭಣ್ಣ ಹುಣಸಿಕಟ್ಟಿ, ಶ್ರೀಶೈಲಪ್ಪ ಬಿದನೂರು, ನೀಲಕಂಠ ಅಸೂಟಿ, ಅಮರೇಶ ಸಂಗಣ್ಣ ಕರಡಿ, ಅರಸಿಕೆರೆ ಕೊಟ್ರೇಶ್, ಹನಗವಾಡಿ ವೀರೇಶ್ ಇತರರು ಉಪಸ್ಥಿತರಿದ್ದರು.

## ಫೆ.15ಕ್ಕೆ ವಿಧಾಸನೌಧಕ್ಕೆ ಮುತ್ತಿಗೆ

ಬರುವ ಫೆಬ್ರವರಿ 15ರ ಸೋಮವಾರ ಪಂಚಮಸಾಲಿ ಸಮಾಜಕ್ಕೆ 2ಎ ಮಿಸಲಾತಿಗಾಗಿ ಆಗ್ರಹಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದಾಗಿ ಹುನಗುಂದ ಮಾಜಿ ಶಾಸಕ, ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಘೋಷಿಸಿದರು.

ಕೂಡಲ ಸಂಗಮ ಶ್ರೀಗಳು ಪ್ರಥಮವಾಗಿ 72 ಲಿಂಗಾಯತ ಒಳ ಪಂಗಡಗಳಗೆ ಒಬಿಸಿ ಮೀಸಲಾತಿ ನೀಡುವಂತೆಯೂ, ಪಂಚಮಸಾಲಿಗರಿಗೆ 2ಎ ಮೀಸಲಾತಿ ನೀಡುವಂತೆಯೂ ಶ್ರೀಗಳು ಬೇಡಿಕೆ ಇಟ್ಟಿದ್ದಾರೆ. ನಾವು ಶಿಕ್ಷಣ, ಉದ್ಯೋಗಕ್ಕಾಗಿ ಮೀಸಲಾತಿ ಕೇಳಿದ್ದೇವೆಯೇ ಹೊರತು, ರಾಜಕೀಯಕ್ಕಾಗಿ ಅಲ್ಲ. ಆದ್ದರಿಂದ ಎಲ್ಲಾ ಒಳ ಪಂಗಡಗಳೂ ಪಾದಯಾತ್ರೆಗೆ ಬೆಂಬಲಿಸಬೇಕು ಎಂದು ಹೇಳಿದರು.ಇಲ್ಲಿವರೆಗೆ ನಡೆಯುತ್ತಿದ್ದ ಶಾಂತಿಯುತ ಪ್ರತಿಭಟನೆ, ದಾವಣಗೆರೆಯಲ್ಲಿ ಕ್ರಾಂತಿ ರೂಪ ಪಡೆಯುತ್ತದೆ. ಶೀಘ್ರವೇ ಸಭೆ ಕರೆದು ಆಯೋಗಕ್ಕೆ ಹೇಳಿ, ಮೀಸಲಾತಿ ಆದೇಶ ಹೊರಡಿಸದಿದ್ದರೆ ದಾವಣಗೆರೆಯಲ್ಲಿ ಕ್ರಾಂತಿಯಾಗುತ್ತದೆ ಎಂದು ಎಚ್ಚರಿಸಿದರು.

## ಶ್ರೀಗಳ ವಾಸ್ತವ್ಯ ಎಲ್ಲಿ.......!

ಕೂಡಲ ಸಂಗಮದ ಶ್ರೀ ಜಯಮೃತ್ಯುಂಜಯ ಶ್ರೀಗಳು ಹರಿಹರದಲ್ಲಿನ ಸಮಾವೇಶದ ನಂತರ ರಾತ್ರಿ ಎಲ್ಲಿ ವಾಸ್ತವ್ಯ ಮಾಡಲಿದ್ದಾರೆ ಎಂಬುದು ಭಕ್ತರ ಕುತೂಹಲಕ್ಕೆ ಕಾರಣವಾಗಿತ್ತು.

ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ವಾಸ್ತವ್ಯ ಮಾಡುವಂತೆ ಮನವಿ ಮಾಡಿದ್ದಾರೆ ಎನ್ನಲಾಗಿತ್ತು. ಇತ್ತ ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಅವರು ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ವಾಸ್ತವ್ಯಕ್ಕೆ ಅನುವು ಮಾಡಿದ್ದರು. ಆದರೆ ಶ್ರೀಗಳು ಈ ಎರಡೂ ಆಹ್ವಾನ ನಿರಾಕರಿಸಿ, ಸಿಂದಗಿ ಕ್ಷೇತ್ರದ ಶಾಸಕ ಎಂ.ಸಿ. ಮನಗೂಳಿ ಅವರು ದೈವಾಧೀನರಾಗಿದ್ದು, ಅಲ್ಲಿಗೆ ತೆರಳಿ, ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿ ಮತ್ತೆ ಪಾದಯಾತ್ರೆಗೆ ಮರಳುವುದಾಗಿ ಹೇಳಿದರು. ಆ ಮೂಲಕ ಭಕ್ತರಲ್ಲಿದ್ದ ಕುತೂಹಲಕ್ಕೆ ತೆರೆ ಎಳೆದರು.

## ಪಾದಯಾತ್ರೆಗೆ ಅಭೂತವೂರ್ವ ಬೆಂಬಲ

ಸಂಜೆ 6.40ರ ಸುಮಾರಿಗೆ ಹರಿಹರದ ಶಿವಮೊಗ್ಗ ವೃತ್ತಕ್ಕೆ ಕೂಡಲ ಸಂಗಮ ಶ್ರೀಗಳ ಪಾದಯಾತ್ರೆ ಆಗಮಿಸಿತು.

ಇದಕ್ಕೂ ಮುನ್ನ ಗುತ್ತೂರಿನ ಭಕ್ತರ ಮನೆಯಿಂದ ಪೂರ್ಣಕುಂಭ ಮೇಳಗಳು, ಸಮಾಳ, ನಂದಿಕೋಲು ಸೇರಿದಂತೆ ಜನಪದ ಕಲಾತಂಡಗಳೊಂದಿಗೆ ಪಾದಯಾತ್ರೆಯನ್ನು ಸ್ವಾಗತಿಸಿ, ಗಾಂಧೀ ಮೈದಾನಕ್ಕೆ ಕರೆತರಲಾಯಿತು.

ಬಿಗಿ ಬಂದೋಬಸ್ತ್ - ಗ್ರಾಮಾಂತರ ಪಿಎಸ್ ಐ ಡಿ.ರವಿಕುಮಾರ್, ಸಿಪಿಐ ಸತೀಶ್ ಕುಮಾರ್, ಮಲೇಬೆನ್ನೂರು ಪಿಎಸ್ಐ ವೀರಬಸಪ್ಪ, ನಗರಠಾಣೆ ಪಿಎಸ್ಐ ಸುನಿಲ್ ಬಸವರಾಜ್, ಶೈಲಶ್ರೀ ನೇತೃತ್ವದಲ್ಲಿ ಸೂಕ್ತ ಬಂದೋ ಬಸ್ತ್ ಏರ್ಪಡಿಸಲಾಗಿತ್ತು.

## ಹಣ ನೀಡಿ ಖರೀದಿಸಲಾಗದು

**(1ನೇ ಪುಟದಿಂದ)** ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರ ಪಾದಯಾತ್ರೆ ಸ್ವಾಗತಿಸಿ, ಹಮ್ಮಿಕೊಂಡಿದ್ದ ಬೃಹತ್ ಪಾದಯಾತ್ರೆಯನ್ನು ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಅವರ ಮಾತನಾಡಿದರು.

ಮಠಗಳಿಗೆ ಹಣ ನೀಡಿದರೆ ಸ್ವಾಮೀಜಿಗಳು ಏರ್ ಕಂಡೀಷನ್ ರೂಂ ಮಾಡಿಕೊಂಡು ಆರಾಮಾಗಿ ಮಲಗುತ್ತಾರೆ. ವೀರಶೈವ ಲಿಂಗಾಯತ ಮಠಗಳನ್ನು ಹಣ ನೀಡಿ ಖರೀದಿಸಲಾಗದು. ಮುಖ್ಯಮಂತ್ರಿಗಳೇ ನಿಮ್ಮ ಯಾವುದೇ ಕೋಟಿಗಳು ನಮಗೆ ಬೇಡ. ಹಿಂದುಳಿದ ವರ್ಗಕ್ಕೆ ನಮ್ಮ ಸಮಾಜವನ್ನು ಸೇರಿಸಿ. ನಮ್ಮ ಸಮಾಜದಿಂದ ನಾವೇ 50 ಕೋಟಿ ರೂ. ಕೊಡುತ್ತೇನೆ ಎಂದು ಮುಖ್ಯಮಂತ್ರಿಗಳಿಗೆ ಹೇಳಿದರು.

ರಾಜಕೀಯ ಮೀಸಲಾತಿ ಪಂಚಮಸಾಲಿಗರಿಗೆ ಬೇಕಿಲ್ಲ. ತಾಕತ್ ಇದ್ದರೆ ಗೆದ್ದು ಮಂತ್ರಿಯಾಗುತ್ತೇವೆ. ಮಠಾಧೀಶರು ಹೇಳಿ ಮಂತ್ರಿಗಿರಿ ಕೊಡಿಸುವ ಅಗತ್ಯವಿಲ್ಲ ಎಂದು ಹರಿಹರ ಪೀಠದ ಶ್ರೀಗಳ ಹೆಸರು ಹೇಳದೆ ತಿರುಗೇಟು ನೀಡಿದರು.

**ಲಿಂಗಾಯತರ ಹೆಸರೇಳಿ ಬ್ಲಾಕ್ ಮೇಲ್ :** ಮುಖ್ಯಮಂತ್ರಿ ಯಡಿಯೂರಪ್ಪನವರು ತಮ್ಮನ್ನು ಕೈ ಬಿಟ್ಟರೆ ವೀರಶೈವ ಲಿಂಗಾಯತರು ದೂರವಾಗುತ್ತಾರೆಂದು ಹೈಕಮಾಂಡ್ ಗೆ ಹೆದರಿಸಿದ್ದಾರೆ. ಸಮಾಜದ ಹೆಸರನ್ನು, ಲಿಂಗಾಯತರ ಹೆಸರನ್ನು ಹೇಳಿ ಕೇಂದ್ರಕ್ಕೆ ಬ್ಲಾಕ್ ಮೇಲ್ ಮಾಡುತ್ತಿದ್ದಾರೆ ಎಂದು ಹೇಳಿದರು.

